# ಜನತಾ ವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಮಂಗಳವಾರ, ಆಗಸ್ಟ್ 03, 2021

ಸಂಪುಟ : 48 ಸಂಚಿಕೆ : 81 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಒಲಿಂಪಿಕ್ಸ್: ಸೆಮಿಫೈನಲ್‌ಗೆ ಮೊದಲ ಬಾರಿಗೆ ಮಹಿಳಾ ಹಾಕಿ ತಂಡ

## ಆಸ್ಟ್ರೇಲಿಯ ವಿರುದ್ಧ 1-0 ಅಂತರದ ಐತಿಹಾಸಿಕ ಗೆಲುವು



ಟೋಕಿಯೋ, ಆ. 2 – ಆಸ್ಟ್ರೇಲಿಯ ವಿರುದ್ಧದ ಪಂದ್ಯದಲ್ಲಿ ದಿಟ್ಟ ಹಾಗೂ ದೃಢ ಪ್ರದರ್ಶನ ನೀಡಿರುವ ಭಾರತೀಯ ಮಹಿಳಾ ಹಾಕಿ ತಂಡ, 1-0 ಅಂತರದ ಗೆಲುವು ಸಾಧಿಸುವುದರೊಂದಿಗೆ, ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಸೆಮಿಫೈನಲ್ ಹಂತ ತಲುಪಿದೆ.

ಸೋಮವಾರ ನಡೆದ ಬಿರುಸಿನ ಪಂದ್ಯದಲ್ಲಿ ಮೂರು ಬಾರಿ ಚಾಂಪಿಯನ್ ಆಗಿರುವ ಹಾಗೂ ವಿಶ್ವದ 2ನೇ ಶ್ರೇಯಾಂಕದಲ್ಲಿರುವ ಆಸ್ಟ್ರೇಲಿಯಾಗೆ ಭಾರತೀಯ ತಂಡ ಆಘಾತಕಾರಿ ಸೋಲುಣಿಸಿ ಇತಿಹಾಸ ಬರೆದಿದೆ. ನಿನ್ನೆಯಷ್ಟೇ ಭಾರತೀಯ ಹಾಕಿ ಪುರುಷರ ತಂಡ 49 ವರ್ಷಗಳ ನಂತರ ಸೆಮಿಫೈನಲ್ ಹಂತಕ್ಕೆ ತಲುಪಿತ್ತು.

ಡ್ರಾಗ್ - ಫ್ಲಿಕರ್ ಗುರ್ಜಿತ್ ಕೌರ್ ಅವರು ಸಮಯೋಚಿತವಾಗಿ ಆಟವಾಡಿ ಭಾರತಕ್ಕೆ ದೊರೆತ ಏಕೈಕ ಪೆನಾಲ್ಟಿ ಕಾರ್ನರ್ ಅವಕಾಶವನ್ನು 22ನೇ ನಿಮಿಷದಲ್ಲಿ ಗೋಲ್ ಆಗಿ ಪರಿವರ್ತಿಸಿದರು.

ಇಡೀ ಸರಣಿಯಲ್ಲಿ ಸೋಲನ್ನೇ ಕಾಣದ ಆಸ್ಟ್ರೇಲಿಯಾ ವಿರುದ್ಧ ಭಾರತೀಯ ಮಹಿಳೆಯರು ಕಠಿಣ ಸವಾಲು ಹೊಂದಿದ್ದರು. ಆದರೆ, ಬಿರುಸಿನ ಹೋರಾಟದಲ್ಲಿ ಮಹಿಳಾ ತಂಡ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಯಿತು.

ಸುದೀರ್ಘ ಕಾಲದ ಕಠಿಣ ಪರಿಶ್ರಮ ಫಲ ನೀಡಿರುವುದು ಸಂತೋಷ ತಂದಿದೆ. 1980ರಲ್ಲಿ ನಾವು ಪಂದ್ಯಾವಳಿಯಲ್ಲಿ ಅರ್ಹತೆ ಪಡೆದಿದ್ದೆವು. ಆದರೆ, ಈ ಬಾರಿ ಸೆಮಿಫೈನಲ್ ಹಂತಕ್ಕೆ ಬಂದಿರುವುದು ನಮಗೆಲ್ಲ ಹೆಮ್ಮೆ ಎಂದು ಪಂದ್ಯದ ನಂತರ ಗುರ್ಜೀತ್ ಹೇಳಿದ್ದಾರೆ.

ರಾಣಿ ರಾಮಪಾಲ್ ನೇತೃತ್ವದ ತಂಡ ಅರ್ಜೆಂಟಿನಾ ವಿರುದ್ಧ ಬುಧವಾರ ಸೆಮಿಫೈನಲ್ ಹಂತದ ಸೆಣಸಾಟ ನಡೆಸಲಿದೆ. ಭಾರತೀಯ ಮಹಿಳೆಯರ ಆರಂಭಿಕ ಆಟ ಮಂದಗತಿಯಲ್ಲಿತ್ತು. ಆಸ್ಟ್ರೇಲಿಯಾ ಗೋಲ್ ಗಳಿಸುವ ಮೊದಲ ಪ್ರಯತ್ನ ನಡೆಸಿದ್ದನ್ನು ಗೋಲ್‌ಕೀಪರ್ ಅಮ್ರೋಸಿಯ ಮಲೊನೆ ತಡೆದರು.

ನಂತರ ಭಾರತೀಯ ಆಟಗಾರ್ತಿಯರು ಬಿರುಸಿನ ದಾಳಿಗಿಳಿದರು. ಇದು ಆಸ್ಟ್ರೇಲಿಯಾದ ರಕ್ಷಣಾ ಆಟಗಾರರಿಗೆ ಅಚ್ಚರಿ ತಂದಿತು. 22ನೇ ನಿಮಿಷದಲ್ಲಿ ಭಾರತಕ್ಕೆ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶ ದೊರೆಯಿತು. ಇದುವರೆಗೂ ನಿರಾಸೆಯನ್ನೇ ಕಾಣುತ್ತಾ ಬಂದಿದ್ದ ಗುರ್ಜಿತ್, ಸಮಯೋಚಿತವಾಗಿ ಗೋಲ್ ಗಳಿಸುವಲ್ಲಿ ಯಶಸ್ವಿಯಾದರು. ಒಂದು ಗೋಲ್‌ನಿಂದ ಹಿಂದೆ ಬಿದ್ದ ಆಸ್ಟ್ರೇಲಿಯಾ, ನಂತರದಲ್ಲಿ (2ನೇ ಪುಟಕ್ಕೆ)

## ಜಿಲ್ಲಾ ನ್ಯಾಯಾಧೀಶರಾಗಿ ರಾಜೇಶ್ವರಿ ಹೆಗಡೆ

ಬೆಂಗಳೂರು, ಆ.2- ದಾವಣಗೆರೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅವರನ್ನು ನೇಮಕ ಮಾಡಿ, ರಾಜ್ಯ ಉಚ್ಛನ್ಯಾಯಾಲಯ ಆದೇಶ ಹೊರಡಿಸಿದೆ.

ರಾಜೇಶ್ವರಿ ಎನ್.ಹೆಗಡೆ ಬೆಂಗಳೂರು ನಗರ 46ನೇ ಹೆಚ್ಚುವರಿ ಸಿವಿಲ್ ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದರು.

ಇದುವರೆಗೂ ದಾವಣಗೆರೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀಮತಿ ಕೆ.ಬಿ.ಗೀತಾ ಅವರನ್ನು ಬೆಂಗಳೂರಿನ ಆಡಳಿತ ನ್ಯಾಯಾಧೀಕರಣದ (3ನೇ ಪುಟಕ್ಕೆ)

## ಆಸ್ತಿ ತೆರಿಗೆ ಪಾವತಿಗೆ ಶೇ.5ರ ರಿಯಾಯಿತಿ ಆ.31 ಕ್ಕೆ ವಿಸ್ತರಣೆ

ಬೆಂಗಳೂರು, ಆ.2- ನಗರ ಸ್ಥಳೀಯ ಸಂಸ್ಥೆಗಳ 2021-22ನೇ ಸಾಲಿನ ಆರ್ಥಿಕ ವರ್ಷದ ಆಸ್ತಿ ತೆರಿಗೆ ಪಾವತಿಗೆ ನೀಡಲಾಗುತ್ತಿರುವ ಶೇ.5ರ ರಿಯಾಯಿತಿಯ ಕಾಲಾವಧಿಯನ್ನು ಆಗಸ್ಟ್ 31 ರವರೆಗೆ ವಿಸ್ತರಿಸಿ, ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ -2 ಮತ್ತು ಮಂಡಳಿ)ಯ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ಇಂದು ಆದೇಶ ಹೊರಡಿಸಿದ್ದಾರೆ. ಕೋವಿಡ್ -19ರ (2ನೇ ಪುಟಕ್ಕೆ)

## ಇಂದು ಸಚಿವರ ಪಟ್ಟಿ ನಿರ್ಧಾರ

ನವದೆಹಲಿ, ಆ. 2 – ರಾಜ್ಯ ಸಂಪುಟಕ್ಕೆ ಸೇರ್ಪಡೆಯಾಗುವವರ ಪಟ್ಟಿ ನಾಳೆ ಮಂಗಳವಾರ ನಿರ್ಧಾರವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರ ಜೊತೆ ಸಂಪುಟ ವಿಸ್ತರಣೆ ಕುರಿತು ಚರ್ಚೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಬೊಮ್ಮಾಯಿ, ಸಂಪುಟ ವಿಸ್ತರಣೆ ಕುರಿತು ಹೇಳಿಕೆ ನೀಡಿದ್ದಾರೆ.

ಒಳ್ಳೆಯ ವಾತಾವರಣದಲ್ಲಿ ಚರ್ಚೆಯಾ ಗಿದೆ. ಹೈಕಮಾಂಡ್ ಒಳ್ಳೆಯ ತೀರ್ಮಾನ ಮಾಡಲಿದೆ ಎಂಬ ವಿಶ್ವಾಸ ಇದೆ. ನಾಳೆ ಸಂಜೆ ಇಲ್ಲವೇ ರಾತ್ರಿ ಸಂಪುಟ ವಿಸ್ತರಣೆ ಪಟ್ಟಿ ದೊರೆಯುವ ನಿರೀಕ್ಷೆಯಲ್ಲಿದ್ದೇವೆ ಎಂದು ಬೊಮ್ಮಾಯಿ ತಿಳಿಸಿದ್ದಾರೆ.

ವಲಸಿಗರಿಗೆ ಸಂಪುಟದಲ್ಲಿ ಸ್ಥಾನ ಸಿಗುವ ಕುರಿತು ಕೇಳಿದ (2ನೇ ಪುಟಕ್ಕೆ)

# ನಾಳೆ ಸಂಪುಟ ವಿಸ್ತರಣೆ ಸಾಧ್ಯತೆ

## 2 ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಸಿಎಂ ಬೊಮ್ಮಾಯಿ

ಬೆಂಗಳೂರು, ಆ. 2 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮಂತ್ರಿಮಂಡಲವನ್ನು ಬುಧವಾರ ಇಲ್ಲವೇ ಗುರುವಾರ ರಚಿಸಲಿದ್ದಾರೆ.

ಸಂಪುಟ ರಚನೆ ಕುರಿತಂತೆ ಬಿಜೆಪಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲು ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ಮುಖ್ಯಮಂತ್ರಿ, ಸಂಪುಟ ಸೇರ್ಪಡೆಗೊಳ್ಳುವವರ ಪಟ್ಟಿಯನ್ನು ಭಾನುವಾರ ತಡರಾತ್ರಿಯೇ ಭಾಗಶಃ ಸಿದ್ಧ ಪಡಿಸಿದ್ದಾರೆ.

ದೆಹಲಿ ತಲುಪುತ್ತಿದ್ದಂತೆ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಜೊತೆ ತಡರಾತ್ರಿವರೆಗೂ ಈ ಸಂಬಂಧ ಚರ್ಚೆ ಮಾಡಿದ್ದಲ್ಲದೆ, ಸೋಮವಾರ ಕೂಡ ಎರಡನೇ ಬಾರಿ ಸಮಾಲೋಚಿಸಿ ನಂತರ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸಮ್ಮುಖದಲ್ಲಿ ಮತ್ತೊಮ್ಮೆ ಚರ್ಚೆ ನಡೆಸಿದ್ದಾರೆ.

ಸಂಪುಟಕ್ಕೆ ಯಾರು ಸೇರ್ಪಡೆಗೊಳ್ಳಬೇಕು ಎಂಬುದನ್ನು ಎಲ್ಲ ಕೋನಗಳಿಂದ ಅಳೆದು-ತೂಗಿ ದೆಹಲಿ ವರಿಷ್ಠರಿಗೆ ರಾಜ್ಯ ಆರ್‌ಎಸ್‌ಎಸ್ ರವಾನೆ ಮಾಡಿತ್ತು.

**ಸಂಘ ಪರಿವಾರ ಮಾಡಿರುವ ಶಿಫಾರಸ್ಸಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ ಎಂಬ ಮಾತುಗಳು ಕೇಳಿ ಬರುತ್ತಿದ್ದು, ಸಂಘದ ಶಿಫಾರಸ್ಸಿನಲ್ಲಿ ಬಿ.ಸಿ. ನಾಗೇಶ್ (ತುಮಕೂರು), ದತ್ತಾತ್ರೇಯ ಪಾಟೀಲ್ ರೇವೂರ (ಕಲಬುರಗಿ), ಪೂರ್ಣಿಮಾ ಶ್ರೀನಿವಾಸ್ (ಚಿತ್ರದುರ್ಗ), ಭರತ್ ಶೆಟ್ಟಿ (ದಕ್ಷಿಣ ಕನ್ನಡ), ಸತೀಶ್ ರೆಡ್ಡಿ (ಬೆಂಗಳೂರು), ಸುನೀಲ್ ಕುಮಾರ್ (ಉಡುಪಿ), ಬಾಲಚಂದ್ರ ಜಾರಕಿಹೊಳಿ (ಬೆಳಗಾವಿ), ಅರವಿಂದ್ ಬೆಲ್ಲದ್ (ಧಾರವಾಡ), ಅಪ್ಪಚ್ಚು ರಂಜನ್ (ಕೊಡಗು) ಸೇರಿದಂತೆ ಇನ್ನೂ ಕೆಲವರಿದ್ದಾರೆ.**

ಈ ಪಟ್ಟಿಯನ್ನೇ ಮುಂದಿಟ್ಟುಕೊಂಡು ರಾಷ್ಟ್ರೀಯ ನಾಯಕರು, ಮುಖ್ಯಮಂತ್ರಿ ಅವರೊಂದಿಗೆ ನಾಲ್ಕೈದು ಬಾರಿ ವಿವಿಧ ಹಂತದಲ್ಲಿ ಚರ್ಚೆ ನಡೆಸಿದ್ದರು.

ಬೊಮ್ಮಾಯಿ ಆಡಳಿತವನ್ನು ಒಂದು ಪ್ರಯೋಗವನ್ನಾಗಿ ಆರ್‌ಎಸ್‌ಎಸ್ ತೆಗೆದುಕೊಂಡಿದ್ದು, ಅದರಂತೆ ಸಂಘ ಪರಿವಾರದ ಜೊತೆ ನಿರಂತರ ಸಂಪರ್ಕ ಇಟ್ಟುಕೊಂಡಿರುವ ಪಕ್ಷದ ಶಾಸಕರು, ಅದರಲ್ಲೂ ಯುವಜನರಿಗೆ ಮಂತ್ರಿಮಂಡಲದಲ್ಲಿ ಅವಕಾಶ ನೀಡುವ ತೀರ್ಮಾನ ಕೈಗೊಂಡಿತ್ತು.

ಇಂತಹ ನಿರ್ಧಾರದಿಂದ ಯಡಿಯೂರಪ್ಪ ಸಂಪುಟದಲ್ಲಿದ್ದ ಕೆಲವು ಹಿರಿಯರು ಹಾಗೂ ಭ್ರಷ್ಟಾಚಾರ ಆರೋಪ ಹೊತ್ತಿರುವವರನ್ನು ನಿರ್ದಾಕ್ಷಿಣ್ಯವಾಗಿ ಸಂಘ ಕೈಬಿಟ್ಟಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂ ರಪ್ಪ ಸರ್ಕಾರವನ್ನು ಅಧಿಕಾರಕ್ಕೆ ತರಲು ಕಾರಣಕರ್ತರಾದ (2ನೇ ಪುಟಕ್ಕೆ)

## ರೈತರ ಸಾಲ ಮನ್ನಾ ಪ್ರಸ್ತಾವನೆ ಇಲ್ಲ

ನವದೆಹಲಿ, ಆ. 2 – ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರೂ ಸೇರಿದಂತೆ ಯಾವುದೇ ರೈತರ ಸಾಲ ಮನ್ನಾ ಮಾಡುವ ಪ್ರಸ್ತಾವನೆ ಪರಿಶೀಲಿಸುತ್ತಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಲೋಕಸಭೆಗೆ ಲಿಖಿತ ಉತ್ತರ (2ನೇ ಪುಟಕ್ಕೆ)

## ರಾಜ್ಯದಲ್ಲಿ ಕೊರೊನಾ ಇಳಿಕೆ

ಬೆಂಗಳೂರು, ಆ. 2 – ರಾಜ್ಯದಲ್ಲಿ ಹೊಸ ಕೊರೊನಾ ಪ್ರಕರಣಗಳ ಪತ್ತೆಯಾಗುವ ಪ್ರಮಾಣ ಇಳಿಕೆಯಾಗಿದ್ದು, ಸೋಮವಾರ 1, 285 ಸೋಂಕಿತರು (2ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 182 ಅಡಿ 8.5 ಇಂಚು
ಒಳ ಹರಿವು: 7854 ಕ್ಯೂಸೆಕ್ಸ್
ಹೊರ ಹರಿವು : 3143 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 153.9 ಅಡಿ

## ನೇರ ಸಬ್ಸಿಡಿಯಿಂದ 1.78 ಲಕ್ಷ ಕೋಟಿ ಉಳಿತಾಯ

ನವದೆಹಲಿ,ಆ. 2 – ಅಡುಗೆ ಅನಿಲ ಸಬ್ಸಿಡಿ, ಪಡಿತರ ಹಣ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳ ನೆರವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಮಾಡುವ ಮೂಲಕ ಸರ್ಕಾರ ಇದುವರೆಗೂ



1.78 ಲಕ್ಷ ಕೋಟಿ ರೂ.ಗಳ ಉಳಿತಾಯ ಮಾಡಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ನಿರ್ದಿಷ್ಟ ಉದ್ದೇಶಕ್ಕಾಗಿ ಬಳಕೆ ಮಾಡಬಹುದಾದ ಇ-ವೋಚರ್‌ಗೆ ಚಾಲನೆ ನೀಡಿದ ನಂತರ ಮಾತನಾಡುತ್ತಿದ್ದ ಪ್ರಧಾನಿ, ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡುವುದರಿಂದ ಸೋರಿಕೆ ಹಾಗೂ ನಕಲಿ ಫಲಾನುಭವಿಗಳ ಹಾವಳಿ ತಪ್ಪುತ್ತಿದೆ ಎಂದಿದ್ದಾರೆ.

ಇ-ರುಪಿ ವೋಚರ್ ಮತ್ತೊಂದು ತಂತ್ರಜ್ಞಾನ ಬೆಳವಣಿಗೆಯಾಗಿದ್ದು, ಇದರಿಂದ ಪಾರದರ್ಶಕತೆ ಬರುತ್ತದೆ. (2ನೇ ಪುಟಕ್ಕೆ)

## ತಿಂಗಳ ಅಂತ್ಯದಲ್ಲಿ 3ನೇ ಅಲೆ ಸಾಧ್ಯತೆ

ನವದೆಹಲಿ, ಆ. 1 – ದೇಶದಲ್ಲಿ ಆಗಸ್ಟ್ ಅಂತ್ಯದೊಳಗೆ ಮೂರನೇ ಕೊರೊನಾ ಅಲೆ ಕಾಣಿಸಿಕೊಳ್ಳಬಹುದು. ಈ ಅಲೆಯಲ್ಲಿ ಅತಿ ಹೆಚ್ಚೆಂದರೆ ದಿನಕ್ಕೆ 1.50 ಲಕ್ಷದಷ್ಟು ಸೋಂಕಿತರು ಕಾಣಿಸಿಕೊಳ್ಳಬಹುದು ಎಂದು ಸಂಶೋಧಕರು ತಿಳಿಸಿದ್ದಾರೆ.

ಹೈದರಾಬಾದ್ ಐ.ಐ.ಟಿ.ಯ ಮತ್ತು ಕುಮಲ್ಲಿ ವಿದ್ಯಾಸಾಗರ್ ಹಾಗೂ ಕಾನ್‌ಪುರ ವಿಶ್ವವಿದ್ಯಾನಿಲಯದ ಮನೀಂದ್ರ ಅಗರ್ ವಾಲ್ ಅವರು ಈ ಕುರಿತು ವರದಿ ರೂಪಿಸಿದ್ದಾರೆ. ಅಕ್ಟೋಬರ್ ವೇಳೆಗೆ ಮೂರನೇ ಕೊರೊನಾ ಅಲೆ ಅತಿ ಹೆಚ್ಚಿನ ಹಂತಕ್ಕೆ ತಲುಪಬಹುದು ಎಂದು ವಿದ್ಯಾಸಾಗರ್ ತಿಳಿಸಿದ್ದಾರೆ. ಗಣಿತದ ಮಾದರಿ ಮೂಲಕ ಈ ವರದಿ ರೂಪಿಸಲಾಗಿದೆ.

ಮೂರನೇ ಕೊರೊನಾ ಅಲೆ ಎರಡನೇ ಅಲೆಯಷ್ಟು ತೀವ್ರದ್ದಾಗಿರುವುದಿಲ್ಲ ಎಂದು ವರದಿ ತಿಳಿಸಿದೆ. ಎರಡನೇ ಅಲೆಯಲ್ಲಿ ದಿನಕ್ಕೆ ಗರಿಷ್ಠ 4 ಲಕ್ಷದಷ್ಟು ಕೊರೊನಾ ಸೋಂಕಿತರು ಕಂಡು ಬಂದಿದ್ದರು. ಪ್ರಸಕ್ತ ದಿನಕ್ಕೆ 40 ಸಾವಿರದಷ್ಟು ಸೋಂಕಿತರು ಕಂಡು ಬರುತ್ತಿದ್ದಾರೆ.

## 3ನೇ ಅಲೆ ತಡೆ ಸರ್ಕಾರದ ಪ್ರಾಥಮಿಕ ಕೆಲಸ



ಬೆಂಗಳೂರು, ಆ. 2 - ಕೊರೊನಾ ಸೋಂಕಿನ ಮೂರನೇ ಅಲೆಯಿಂದ ರಾಜ್ಯ ತತ್ತರಿಸದಂತೆ ನೋಡಿಕೊಳ್ಳುವುದು ಸರ್ಕಾರದ ಪ್ರಾಥಮಿಕ ಕೆಲಸವಾಗಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ನೆರೆಯ ರಾಜ್ಯಗಳಾದ ಮಹಾರಾಷ್ಟ್ರ ಹಾಗೂ ಕೇರಳದಲ್ಲಿ ಸೋಂಕಿನ ಮೂರನೇ ಅಲೆ ಈಗಾಗಲೇ ಕಾಣಿಸಿಕೊಂಡಿದ್ದು, ದಿನದಿಂದ ದಿನಕ್ಕೆ ಸೋಂಕಿತರ ಪ್ರಮಾಣ ಹೆಚ್ಚಾಗುತ್ತಿದೆ. ಈ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವವರ ಪ್ರಮಾಣ ಹೆಚ್ಚಾಗಿರುತ್ತದೆ, ಆದ್ದರಿಂದ ರಾಜ್ಯದ ಗಡಿಗಳಲ್ಲಿ ಕಟ್ಟೆಚ್ಚರ ವಹಿಸಬೇಕು ಎಂದವರು ಹೇಳಿದ್ದಾರೆ.

ಕೇರಳದಿಂದ ಪ್ರತಿನಿತ್ಯ ರಾಜ್ಯದ ಕರಾವಳಿ, ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ ಹೆಚ್ಚು ಜನ ಆಗಮಿಸುತ್ತಿದ್ದು, ಗಡಿಭಾಗದಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಿ, ಸೋಂಕಿನ ಎರಡೂ ಡೋಸ್ ಲಸಿಕೆ ಪಡೆಯದವರನ್ನು ಗಡಿ ಒಳಗೆ ಬಿಡಬಾರದು ಹಾಗೂ ಇಂತಹವರ ಪರೀಕ್ಷೆ ನಡೆಸಿ ನೆಗೆಟಿವ್ ವರದಿ ಹೊಂದಿದ್ದವರನ್ನು ಮಾತ್ರ (2ನೇ ಪುಟಕ್ಕೆ)

## ಕೊರೊನಾ ಹಿನ್ನೆಲೆ : ಹರಿಹರದ ಇಂದಿನ ವಾರದ ಸಂತೆ ರದ್ದು

ಕೋವಿಡ್ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ತಿಳಿಸಿದ್ದು, ಹರಿಹರದಲ್ಲಿ ಇಂದು ನಡೆಯುವ ವಾರದ ಸಂತೆಯನ್ನು ರದ್ದುಪಡಿಸಲಾಗಿದೆ ಎಂದು ನಗರ ಸಭೆ ಪೌರಾಯುಕ್ತರಾದ ಶ್ರೀಮತಿ ಲಕ್ಷ್ಮಿ ತಿಳಿಸಿದ್ದಾರೆ.






## ತವರಿಗೆ ಮರಳಿದ ಯೋಧನಿಗೆ ಸ್ವಾಗತ



### 21 ವರ್ಷ ಸೈನ್ಯದಲ್ಲಿ ಸೇವೆ ಸಲ್ಲಿಸಿ ಮರಳಿದ ತೋಳಹುಣಸೆಯ ಸುರೇಶ್ ರಾವ್ ಘೋರ್ಪಡೆ


ದಾವಣಗೆರೆ, ಜು.2- 21 ವರ್ಷಗಳ ದೇಶ ರಕ್ಷಣೆಗೆ ಜೀವನ ಮುಡಿಪಾಗಿಟ್ಟು ಸೇವೆ ಸಲ್ಲಿಸಿ ಇದೀಗ ನಿವೃತ್ತರಾಗಿ ದಾವಣಗೆರೆಗೆ ಮರಳಿದ ವೀರ ಯೋಧ ಹೆಚ್.ಸುರೇಶ್ ರಾವ್ ಘೋರ್ಪಡೆ ಅವರನ್ನು ಜಿಲ್ಲಾಡಳಿತದಿಂದ ಇಂದು ನಗರಕ್ಕೆ ಗೌರವ ಪೂರ್ವಕವಾಗಿ ಬರಮಾಡಿಕೊಳ್ಳಲಾಯಿತು.

ರೈಲ್ವೆ ನಿಲ್ದಾಣಕ್ಕೆ ಬಂದಿಳಿದ ತೋಳಹುಣಸೆಯ ಸುರೇಶ್ ರಾವ್ ಅವರನ್ನು ಸನ್ಮಾನಿಸಿ, ಗೌರವದಿಂದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಸಿ.ಬಿ. ರಿಷ್ಯಂತ್ ಅವರುಗಳಲ್ಲದೇ, ಕುಟುಂಬದವರು, ಸ್ನೇಹಿತರು, ಸಂಬಂಧಿಕರು ಸಾರ್ವಜನಿಕರು ಅದ್ದೂರಿಯಾಗಿ ಸ್ವಾಗತಿಸಿದರು.

ಸ್ಥಳದಲ್ಲಿದ್ದವರೆಲ್ಲರೂ ಯೋಧನ ಜೊತೆ ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದರು. ದೇಶ ರಕ್ಷಣೆಗಾಗಿ ಜೀವನ ತ್ಯಾಗಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಅನುಭವ ಹಂಚಿಕೊಂಡ ಯೋಧ ಸುರೇಶ್ ರಾವ್, ನಾನು ಸೇನೆಯಲ್ಲಿ ಕೆಲಸ ಮಾಡಿದ್ದು ಪುಣ್ಯ. ದೇಶ ಸೇವೆಗೆ ಜೀವನ ಮುಡುಪಾಗಿಟ್ಟಿದ್ದು ಸಾರ್ಥಕವಾಯಿತು. ಬಾಂಬ್ ಹುಡುಕಿದ್ದು, ಪಾಕ್‌ನ ಒಬ್ಬ ಉಗ್ರನನ್ನು ಹೊಡೆದುರುಳಿಸಿದ್ದು, ನಕ್ಸಲ್ ಎನ್‌ಕೌಂಟರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು, ಸೇನೆಗೆ ಸೇರಿದವರಿಗೆ ತರಬೇತಿ ನೀಡಿದ್ದು (2ನೇ ಪುಟಕ್ಕೆ)

## ಚಿಕ್ಕಮಜ್ಜಿಗೇರಿಯಲ್ಲಿ ಚಿರತೆ ಸೆರೆ



ಹರಪನಹಳ್ಳಿ, ಆ.2- ತಾಲ್ಲೂಕಿನ ಚಿಕ್ಕಮಜ್ಜಿಗೇರಿಯ ಗ್ರಾಮಸ್ಥರ ಚಾಣಾಕ್ಷತನದಿಂದ ಸುಮಾರು 5 ವರ್ಷದ ಚಿರತೆ ಸೆರೆಯಾಗಿದೆ.

ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಭರತ್ ಡಿ. ತಳವಾರ ನೇತೃತ್ವದ ತಂಡ ಚಿರತೆ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಕಳೆದ ರಾತ್ರಿ ಗ್ರಾಮ ಹೊರವಲಯದಲ್ಲಿರುವ ಪೂಜಾರ್ ಬಸಪ್ಪನವರ ಜಮೀನಿನಲ್ಲಿರುವ ರೇಷ್ಮೆ ಮನೆಯಲ್ಲಿದ್ದ ಆಕಳು, ಕರುವಿನ ರಕ್ತ ಕುಡಿದು ಹೋಗಿತ್ತು.

ಗ್ರಾಮಸ್ಥರು ಮರುದಿನ ಚಿರತೆ ಬರುವ ನಿರೀಕ್ಷೆಯಿಂದ ಆ ಕರುವಿನ ಮಾಂಸವನ್ನು ಅದೇ ರೇಷ್ಮೆಮನೆಯಲ್ಲಿ ತೂಗಿ ಹಾಕಿ ಕದಕ್ಕೆ ಹಗ್ಗ ಕಟ್ಟಿದ್ದರು. ಚಿರತೆ ಮಾಂಸ ತಿನ್ನಲು ಒಳಗೆ ಹೋಗುತ್ತಿದ್ದಂತೆ ದೂರದಿಂದಲೇ ಹಗ್ಗ ಎಳೆದು ಬಾಗಿಲು ಮುಚ್ಚಿ ಅರಣ್ಯ ಇಲಾಖೆಗೆ (2ನೇ ಪುಟಕ್ಕೆ)

(2ನೇ ಪುಟಕ್ಕೆ)

## ವಿಮಾ ತಿದ್ದುಪಡಿ ಮಸೂದೆ ಒಪ್ಪಿಗೆ

ನವದೆಹಲಿ, ಆ. 2 – ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಲ್ಲಿ ಸರ್ಕಾರ ತನ್ನ ಪಾಲನ್ನು ಮಾರಲು ಅವಕಾಶ ನೀಡುವ ಮಸೂದೆಗೆ ಲೋಕಸಭೆಯಲ್ಲಿ ಚರ್ಚೆ ಇಲ್ಲದೇ ಒಪ್ಪಿಗೆ ನೀಡಲಾಗಿದೆ. ಪ್ರತಿಪಕ್ಷಗಳು ಪೆಗಾಸಸ್ ಕಣ್ಗಾವಲು ಹಾಗೂ ಇತರೆ ವಿಷಯಗಳ ಕುರಿತು ಪ್ರತಿಭಟನೆ ನಡೆಸುತ್ತಿರುವ ಮಧ್ಯೆ ಮಸೂದೆಗಳಿಗೆ ಒಪ್ಪಿಗೆ ನೀಡಲಾಗಿದೆ.

ಸಾಮಾನ್ಯ ವಿಮೆ ವ್ಯವಹಾರಗಳ (ರಾಷ್ಟ್ರೀಕರಣ) ತಿದ್ದುಪಡಿ ಮಸೂದೆ, 2021 ಮೂಲಕ ಸಾರ್ವಜನಿಕ ವಲಯದ ವಿಮಾ ಕಂಪನಿಗಳು ಆವಿಷ್ಕಾರಿ ಉತ್ಪನ್ನಗಳನ್ನು ರೂಪಿಸಲು ಅವಕಾಶ ಕಲ್ಪಿಸಲಾಗುವುದು. (3ನೇ ಪುಟಕ್ಕೆ)




# ಕೃಷಿ ಇಲಾಖೆ ತಜ್ಞರಿಂದ ಸಲಹೆ




ಜಗಳೂರು, ಆ.2- ನರೇಗ ಯೋಜನೆ ಅಡಿಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಎರೆಹುಳು ತೊಟ್ಟಿ ಕಟ್ಟಿಸಿಕೊಳ್ಳಲು 'ರೈತ ಬಂಧು' ಎಂಬ ಹೊಸ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ಸಂಬಂಧಪಟ್ಟ ಇಲಾಖೆಗಳಲ್ಲಿ ಆಸಕ್ತ ರೈತರು ನೋಂದಣಿ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಉಪ ಕೃಷಿ ನಿರ್ದೇಶಕ ಆರ್. ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ಆತ್ಮ ಯೋಜನೆಯಡಿಯಲ್ಲಿ ಕೃಷಿ ಇಲಾಖೆ ಮತ್ತು (ಐ.ಸಿ.ಎ.ಆರ್) ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಮತ್ತು ಇಫ್ಕೋ ಸಂಯುಕ್ತ ಆಶ್ರಯದಲ್ಲಿ ಬೆಳೆ ವೀಕ್ಷಣೆಯ ಕಾರ್ಯಕ್ರಮವನ್ನು ತಜ್ಞರ ತಂಡದೊಂದಿಗೆ ಮರೇನಹಳ್ಳಿ, ಹಳುವದಂಡಿ, ದೇವಿಕೆರೆ ಗ್ರಾಮಗಳಲ್ಲಿ ಜಮೀನುಗಳಿಗೆ ಭೇಟಿ ನೀಡಿ ರೈತರಿಗೆ ಸಲಹೆ ನೀಡಿದರು.

ನಂತರ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಬೆಳೆ ಚೆನ್ನಾಗಿ ಬೆಳೆದಿದೆ ಎಂದು ನಿರ್ಲಕ್ಷಿಸಬಾರದು ಮತ್ತು ಬೆಳೆ ವಿಮೆಯನ್ನು ಕಡ್ಡಾಯವಾಗಿ ಜುಲೈ 31 ರೊಳಗಾಗಿ ತಮ್ಮ ಸಂಬಂಧಪಟ್ಟ ಬ್ಯಾಂಕ್ ಮತ್ತು ಸೇವಾ ಕೇಂದ್ರಗಳಲ್ಲಿ ನಿಮ್ಮ ಬೆಳೆ ವಿಮೆಯನ್ನು ಕಟ್ಟಿಕೊಳ್ಳಬೇಕು.

ರೈತರು ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ತಾವೇ ಬೆಳೆದ ಬೆಳೆಗಳನ್ನು ನಮೂದು ಮಾಡುವ ಅಧಿಕಾರವನ್ನು ಸರ್ಕಾರ ನೇರವಾಗಿ ರೈತರಿಗೆ ಕೊಟ್ಟಿದೆ. ಈಗ ರೈತರು ತಾವು ಬೆಳೆದ ಬೆಳೆಯನ್ನು ನೇರವಾಗಿ ಮೊಬೈಲ್ ಆ್ಯಪ್ ಮೂಲಕ ತಮ್ಮ ಅಧಿಕಾರ ಚಲಾಯಿಸಿ ನಮೂದು ಮಾಡಿಕೊಳ್ಳಬಹುದು. ಇದರಿಂದ ಅಕ್ಕಡಿ ಬೆಳೆ, ಮಿಶ್ರಬೆಳೆ, ಸಿರಿಧಾನ್ಯ ಮುಂತಾದ ಬೆಳೆಗಳನ್ನು ಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ. ಇದರಿಂದ ಮುಂದೆ ಖರೀದಿ ಕೇಂದ್ರ ಮತ್ತು ಬೇರೆ ಸೌಲಭ್ಯಗಳನ್ನು ರೈತರಿಗೆ ಪರಿಹಾರ ಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದರು.

ತಾಲ್ಲೂಕಿನಲ್ಲಿ ಅಕ್ಕಡಿ ಬೆಳೆಯಾದ ತೊಗರಿ ಬೆಳೆ ಚೆನ್ನಾಗಿ ಬೆಳೆದಿದೆ. ಇನ್ನು 15 ದಿನಗಳು ಬಿಟ್ಟು ಕುಡಿ ಚಿವುಟುವ ಕೆಲಸಕ್ಕೆ ಚಾಲನೆ ಕೊಡುತ್ತೇವೆ. ಈ ಕುಡಿ ಚಿವುಟುವುದರಿಂದ ರೆಂಬೆ, ಕೊಂಬೆಗಳು ಜಾಸ್ತಿಯಾಗಿ ಇಳುವರಿ ಮಟ್ಟ ಜಾಸ್ತಿಯಾಗುತ್ತದೆ ಎಂದರು.

ಡಾ. ಮಲ್ಲಿಕಾರ್ಜುನ ಮತ್ತು ಡಾ. ಸಣ್ಣಗೌಡರು ನ್ಯಾನೋ ಯೂರಿಯಾ ಮತ್ತು ಕೀಟಗಳ ನಿರ್ವಹಣೆ ಕುರಿತು ಮಾಹಿತಿ ನೀಡಿದರು.

ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಶ್ರೀನಿವಾಸಲು ಮಾತನಾಡಿ, ಮೆಕ್ಕೆಜೋಳ ಬೆಳೆಯಲ್ಲಿ ಲದ್ದಿ ಹುಳುಗಳು ಮಳೆ ಬಂದಿದ್ದರಿಂದ ಸ್ವಲ್ಪ ಹತೋಟಿಗೆ ಬಂದಿದೆ. ಮಳೆ ಬರವು ಕಾಯ್ದು ಕೊಂಡಾಗ ಮತ್ತೆ ಮರುಕಳಿಸುವ ಸಾಧ್ಯತೆ ಇದೆ. ಅದಕ್ಕೆ ರೈತರು ನಿರ್ಲಕ್ಷಿಸದೆ ನಮ್ಮ ರೈತ ಸಂಪರ್ಕ ಕೇಂದ್ರಗಳಲ್ಲಿನ ಔಷಧಿಗಳು ರೈತ ಸಂಪರ್ಕ ಕೇಂದ್ರದಲ್ಲಿ ಸಿಗುತ್ತವೆ. ರೈತರು ತೆಗೆದುಕೊಂಡು ಸಿಂಪರಣೆ ಮಾಡಬೇಕು ಎಂದರು.

ಮೆಕ್ಕೆಜೋಳ ಬಿತ್ತನೆ ಹೊಸಕೆರೆ ಹೋಬಳಿಯಲ್ಲಿ ಸ್ವಲ್ಪ ತಡವಾಗಿದೆ. ಅಲ್ಲಿ ಲಘು ಪೋಷಕ ಔಷಧಿಯನ್ನು ರೈತ ಸಂಪರ್ಕ ಕೇಂದ್ರದಲ್ಲಿ ತೆಗೆದುಕೊಂಡು ರೈತರು ಬೆಳೆಗಳಿಗೆ ಸಿಂಪರಣೆ ಮಾಡಬೇಕು ಮತ್ತು ನ್ಯಾನೋ ಯೂರಿಯಾ ಅರ್ಧ ಲೀಟರ್ ಬಾಟಲ್ ಬಂದಿದೆ. ಒಂದು ಎಕರೆಗೆ ಒಂದು ಬಾಟಲ್ ಹೊಲಗಳಿಗೆ ಸಿಂಪರಣೆ ಮಾಡಬೇಕು ಎಂದು ತಿಳಿಸಿದರು. ಯೂರಿಯಾ ಮಿತವಾಗಿ ಬಳಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಆತ್ಮಯೋಜನೆಯ ಜಿಲ್ಲಾ ಸಂಯೋಜಕ ಚಂದ್ರಶೇಖರ್, ಇಫ್ಕೋ ಸಂಸ್ಥೆಯ ಪ್ರತಿನಿಧಿ ರಾಜೇಂದ್ರ ಪ್ರಸಾದ್, ಆತ್ಮ ಯೋಜನೆಯ ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಅನಿಲ್ ಕುಮಾರ್ ಸೇರಿದಂತೆ, ರೈತರು ಭಾಗವಹಿಸಿದ್ದರು.

# ಶಿಕ್ಷಕ ಹೂಗಾರ್ ನಿವೃತ್ತಿ : ಆತ್ಮೀಯ ಬೀಳ್ಕೊಡುಗೆ

ಮಲೇಬೆನ್ನೂರು, ಆ.2- ಹಾಲಿವಾಣ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಎಚ್. ಹೂಗಾರ್ ಅವರು ವಯೋ ನಿವೃತ್ತಿ ಹೊಂದಿದ್ದು, ಶಾಲೆಯಲ್ಲಿ ನಿನ್ನೆ ನಡೆದ ಸರಳ ಸಮಾರಂಭದಲ್ಲಿ ಹೂಗಾರ್ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ ವಿಭಾಗದ ನಿರ್ದೇಶಕ ಎಂ. ಎಸ್ ಪ್ರಸನ್ನಕುಮಾರ್, ಹೂಗಾರ್ ಅಷ್ಟೇ ಅಲ್ಲದೇ, ಅವರ ಕುಟುಂಬದವರೂ ಕೂಡಾ ಶಿಕ್ಷಣ ಇಲಾಖೆಗೆ ಪರಿಚಿತರಾಗಿದ್ದು, ಹೂಗಾರ್ ಮತ್ತು ಅವರ ಕುಟುಂಬ ಶಿಕ್ಷಣ ಇಲಾಖೆಯ ಬಹುದೊಡ್ಡ ಆಸ್ತಿ ಎಂದು ಶ್ಲಾಘಿಸಿದರು.

ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ ಮಾತನಾಡಿ, ಹೂಗಾರ್ ಅವರ ಪಾಠ ಕೇಳಲು ವಿದ್ಯಾರ್ಥಿಗಳು ಕಾಯುತ್ತಿದ್ದರೆಂದರೆ ಅವರ ವ್ಯಕ್ತಿತ್ವ ಎಂತಹದ್ದು ಎಂದು ಗೊತ್ತಾಗುತ್ತದೆ ಎಂದರು.

ಹರಿಹರ ಬಿಇಓ ಸಿದ್ದಪ್ಪ ಮಾತನಾಡಿ, ಶಿಕ್ಷಕ ವೃತ್ತಿಯ ಜೊತೆಗೆ ಹರಿಹರ ತಾಲ್ಲೂಕು ಮತ್ತು ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಸೇವೆ ಸಲ್ಲಿಸುವುದರ ಜೊತೆಗೆ ದಾನಿಗಳ ನೆರವಿನಿಂದ ದಾವಣಗೆರೆ ಜಿಲ್ಲೆಯ ಪ್ರಥಮ ಹಾಗೂ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ಮಾಡಿದ ಕೀರ್ತಿ ಹೂಗಾರ್ ಅವರಿಗೆ ಸಲ್ಲುತ್ತದೆ ಎಂದು ಶ್ಲಾಘಿಸಿದರು.

ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಎಸ್.ಎಚ್. ಹೂಗಾರ್ ಅವರು, ದಿನಾಂಕ 5.9.1985 ರಂದು ಶಿಕ್ಷಕರ ದಿನಾಚರಣೆಯ ದಿನವೇ ಶಿಕ್ಷಕ ವೃತ್ತಿಗೆ ಸೇರಿಕೊಂಡೆ, ಪ್ರೌಢಶಾಲೆಯ ಸಹ ಶಿಕ್ಷಕನಾಗಿ, ಶಾಲಾ ತನಿಖಾಧಿಕಾರಿ, ಪ್ರೌಢಶಾಲಾ ಮುಖ್ಯ ಶಿಕ್ಷಕನಾಗಿ 38 ವರ್ಷಗಳ ಸೇವೆ ಜೀವನದಲ್ಲಿ ತೃಪ್ತಿ ತಂದಿದೆ ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ದೊಡ್ಡ ವೀರಾಚಾರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ತಾ.ಪಂ ಮಾಜಿ ಅಧ್ಯಕ್ಷ ಎಸ್.ಜಿ. ಪರಮೇಶ್ವರಪ್ಪ ಮಾತನಾಡಿದರು.



ಗ್ರಾಮದ ನಿವೃತ್ತ ಶಿಕ್ಷಕ ಹನುಮಂತಪ್ಪ, ಶಿಕ್ಷಕ ಸಂಜಯ್, ಶಿಕ್ಷಕಿ ಮರಳಸಿದ್ದಮ್ಮ ಮಾತನಾಡಿದರು.

ಹರಿಹರ ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ. ಪ್ರೌಢಶಾಲೆಗಳ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಕೊಕ್ಕನೂರು ಜಯಣ್ಣ, ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಚಂದ್ರಪ್ಪ, ಹರಿಹರ ಬಿಆರ್‌ಸಿ ಕೆ.ಆರ್ ವಿಶ್ವನಾಥ್, ಹೊನ್ನಾಳಿ ಬಿಆರ್‌ಸಿ ಉಮಾಶಂಕರ್, ಮಧುಗಿರಿ ಡಯಟ್ ಉಪನ್ಯಾಸಕ ಬಿ.ಕೆ ದಿನೇಶ್, ಶಿಕ್ಷಕ ಮಲ್ಲಿಕಾರ್ಜುನ್ ಅಂಗಡಿ, ಹೂಗಾರ್ ಅವರ ಸಹೋದರ ಪಿ. ರುದ್ರಮುನಿ, ಹೂಗಾರ್ ಪತ್ನಿ ಶ್ರೀಮತಿ ಭಾರತಿ, ಕುಂಬಳೂರು ವಾಸು, ಪತ್ರಕರ್ತರಾದ ಸದಾನಂದ್, ಜಿಗಳಿ ಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

ಸಂಗೀತ ಶಿಕ್ಷಕ ದ್ಯಾಮನಗೌಡರ ಮಹೇಶ್ ಚಂದ್ರಗೌಡ ಪ್ರಾರ್ಥಿಸಿದರು. ಗಣಿತ ಶಿಕ್ಷಕ ಆರ್. ವೆಂಕಟೇಶ್ ಸ್ವಾಗತಿಸಿದರು. ಹಿಂದಿ ಶಿಕ್ಷಕ ಪಿ. ರಮೇಶ್ ನಿರೂಪಿಸಿದರೆ, ಇಂಗ್ಲಿಷ್ ಶಿಕ್ಷಕ ಡಿ. ಮಾಲತೇಶ್ ವಂದಿಸಿದರು.

# ಸಬ್ಸಿಡಿ ಮೂಲಕ 1.78 ಲಕ್ಷ ಕೋಟಿ ಉಳಿತಾಯ

**(1ನೇ ಪುಟದಿಂದ)** ಖಾಸಗಿ ವ್ಯಕ್ತಿಗಳ ದಾನವನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸಲು ಸಾಧ್ಯವಾಗಲಿದೆ ಎಂದರು.

ಭಾರತ ಇದುವರೆಗೂ 17.5 ಲಕ್ಷ ಕೋಟಿ ರೂ. ಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಮಾಡಿದೆ. 300 ಕೇಂದ್ರ ಪ್ರಾಯೋಜಿತ ಯೋಜನೆಗಳು ನೇರ ಹಣ ಜಮಾ ಯೋಜನೆ ವ್ಯಾಪ್ತಿಗೆ ಬಂದಿವೆ ಎಂದು ಪ್ರಧಾನಿ ತಿಳಿಸಿದ್ದಾರೆ. ಸರ್ಕಾರವಷ್ಟೇ ಅಲ್ಲದೇ, ಖಾಸಗಿ ವ್ಯಕ್ತಿಗಳು ಇಲ್ಲವೇ ಸಂಘಟನೆಗಳು ಯಾರಿಗಾದರೂ ಚಿಕಿತ್ಸೆ, ಶಿಕ್ಷಣ ಇಲ್ಲವೇ ಬೇರೆ ಯಾವುದೇ ಉದ್ದೇಶಕ್ಕೆ ನೆರವು ನೀಡಬೇಕಾದಲ್ಲಿ ನಗದು ನೀಡುವ ಬದಲು ಇ-ರುಪಿ ಬಳಸಬಹುದು. ಇದರಿಂದ ಹಣ ನಿರ್ದಿಷ್ಟ ಉದ್ದೇಶಕ್ಕೆ ತಲುಪುವುದು ಖಚಿತವಾಗುತ್ತದೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಇ-ರುಪಿ ನಗದು ರಹಿತ ಹಾಗೂ ಸಂಪರ್ಕ ರಹಿತ ಡಿಜಿಟಲ್ ಪಾವತಿ ವ್ಯವಸ್ಥೆಯಾಗಿದೆ. ಇದನ್ನು ಕ್ಯೂ.ಆರ್. ಕೋಡ್ ಇಲ್ಲವೇ ಎಸ್.ಎಂ.ಎಸ್. ಆಧಾರದ ಮೂಲಕ ಇ-ವೋಚರ್ ಬಳಕೆಗೆ ಉಪಯೋಗಿಸಬಹುದು. ರಾಷ್ಟ್ರೀಯ ಪಾವತಿ ಆಯೋಗ ಇ-ರುಪಿ ರೂಪಿಸಿದೆ. ಮೊದಲು ಆರೋಗ್ಯ ವಲಯದಲ್ಲಿ ಇ-ರುಪಿ ಜಾರಿಗೆ ಬರಲಿದ್ದು, ನಂತರ ಇತರೆ ವಲಯಗಳಿಗೆ ವಿಸ್ತರಿಸಲಾಗುವುದು.

# ಸೆಮಿಫೈನಲ್‌ಗೆ ಮೊದಲ ಬಾರಿಗೆ ಹಾಕಿ ತಂಡ

**(1ನೇ ಪುಟದಿಂದ)** ಹಲವು ಬಾರಿ ದಾಳಿ ನಡೆಸಿತು. ಆದರೆ, ಸವಿತಾ ಗೋಲ್ ಅವಕಾಶಗಳನ್ನು ತಡೆಯುವಲ್ಲಿ ಯಶಸ್ವಿಯಾದರು. ಸತತ ಮೂರು ಬಾರಿ ಪೆನಾಲ್ಟಿ ಕಾರ್ನರ್ ಪಡೆದ ಆಸ್ಟ್ರೇಲಿಯಾವನ್ನು ಸವಿತ ಹಾಗೂ ದೀಪ್ ಗ್ರೇಸ್ ಎಕ್ಕಾ ನೇತೃತ್ವದ ರಕ್ಷಣಾ ತಂಡ ತಡೆಯಿತು.

ನಂತರ ಬಹುತೇಕ ಆಟ ಭಾರತದ ವೃತ್ತದಲ್ಲೇ ನಡೆಯಿತು. ತೀವ್ರ ಒತ್ತಡವನ್ನು ಎದುರಿಸಿದ ಭಾರತೀಯ ಆಟಗಾರ್ತಿಯರು, ಯಾವುದೇ ಗೋಲ್ ಗಳಿಸುವ ಅವಕಾಶ ನೀಡಲಿಲ್ಲ. ಆಟದ ಕೊನೆಯ ಎಂಟು ನಿಮಿಷಗಳಲ್ಲಿ ಆಸ್ಟ್ರೇಲಿಯಾ ನಾಲ್ಕು ಪೆನಾಲ್ಟಿ ಕಾರ್ನರ್ ಅವಕಾಶ ಪಡೆಯಿತು. ಆದರೆ, ಭಾರತದ ರಕ್ಷಣಾ ಕೋಟೆ ಬೇಧಿಸಲು ಸಾಧ್ಯವಾಗಲಿಲ್ಲ.

# ತವರಿಗೆ ಮರಳಿದ ಯೋಧನಿಗೆ ಸ್ವಾಗತ

**(1ನೇ ಪುಟದಿಂದ)** ಮರೆಯಲಾರದ ಕ್ಷಣಗಳು. ನನಗೆ ಜಿಲ್ಲಾಡಳಿತ ಅಭಿನಂದಿಸಿದ್ದು, ತುಂಬಾ ಖುಷಿ ನೀಡಿದೆ. ಎಲ್ಲಾ ಯೋಧರಿಗೂ ಈ ಗೌರವ ಸಿಗುವಂತಾಗಲಿ ಎಂದು ಆಶಿಸಿದರು.

**ಆಯುಧವಿಲ್ಲದೇ ನೆಲದಲ್ಲಿದ್ದ ಬಾಂಬ್‌ಗಳ ಪತ್ತೆ:** ದೇಶ ಸೇವೆಗೆ ಹೋದ ಈ ಯೋಧ ಮಾಡಿರುವ ಸಾಧನೆ ಎಂಥವರನ್ನು ನಿಬ್ಬೆರಗಾಗಿಸುತ್ತೆ. ಶೌರ್ಯ, ಪರಾಕ್ರಮದಿಂದ ಸಿಕ್ಕಿರುವ ಮೆಡಲ್ ಇವರ ಸೇವೆಗೆ ಸಾಕ್ಷಿ. 21 ವರ್ಷಗಳ ಕಾಲ ಸೇನೆಯಲ್ಲಿದ್ದು, ದೇಶ ಸೇವೆ ಮಾಡಿರುವ ಹೆಚ್. ಸುರೇಶ್ ರಾವ್ ಘೋರ್ಪಡೆ ವೀರ ಯೋಧನ ಸಾಹಸಗಾಥೆ ನಮ್ಮ ದಾವಣಗೆರೆಗೆ ಹೆಮ್ಮೆ.

ತೋಳಹುಣಸೆಯ ಸುರೇಶ್ ರಾವ್ ಘೋರ್ಪಡೆ ಅವರ ತಂದೆ ಹನುಮಂತಪ್ಪ ಹಾಗೂ ತಾಯಿ ನಾಗಮ್ಮ ಇಟಗಿ. 1979ರ ಜೂನ್ 4ರಂದು ಜನಿಸಿದ್ದ ಸುರೇಶ್ ಅವರಿಗೆ ಚಿಕ್ಕವಯಸ್ಸಿನಲ್ಲೇ ದೇಶಕ್ಕಾಗಿ ತನ್ನ ಕೈಲಾದಷ್ಟು ಸೇವೆ ಸಲ್ಲಿಸಬೇಕೆಂಬ ಹಂಬಲ ಇತ್ತು. ಯುವಕನಾಗುತ್ತಿದ್ದಂತೆ 2000 ನೇ ಇಸವಿಯಲ್ಲಿ ಶಿವಮೊಗ್ಗದಲ್ಲಿ ನಡೆದ ರ‍್ಯಾಲಿಯಲ್ಲಿ ಸೇನೆಗೆ ಆಯ್ಕೆಯಾಗುವ ಮೂಲಕ ದೇಶ ಸೇವೆಗೆ ಹೊರಟು ನಿಂತರು. ಪ್ರಾಣದ ಹಂಗು ತೊರೆದು ಕೆಲವು ಬಾರಿ ಆಪತ್ತು ತಪ್ಪಿಸಿದ ಮಹಾ ಚತುರ. ಪಾಕಿಸ್ತಾನದ ಇಬ್ಬರು ಉಗ್ರರಿಗೆ ಗುಂಡು ಹೊಡೆದು ನೆಲಕ್ಕುರುಳಿಸುವ ಮೂಲಕ ಅಪಾಯ ತಪ್ಪಿಸಿದ್ದರು. ನೆಲದಲ್ಲಿ ಹೂತಿಟ್ಟಿದ್ದ ಬಾಂಬ್ ಗಳನ್ನು ಯಾವ ಆಯುಧವಿಲ್ಲದೇ ಪತ್ತೆ ಹಚ್ಚಿದ ಯೋಧ ಎಂಬ ಹೆಗ್ಗಳಿಕೆಗೆ ಪಾತ್ರರಾದ ಏಕೈಕ ಸೇನಾನಿ. ನದಿ ದಾಟುವ ವೇಳೆ ಕಳೆದು ಹೋಗಿದ್ದ ತಮ್ಮದೇ ಬಾಂಬ್ ಗಳನ್ನು ಹುಡುಕಿಕೊಟ್ಟ ದಿಟ್ಟ ಯೋಧ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

ಸುರೇಶ್ ರಾವ್ ಆರಂಭದಲ್ಲಿ ಭಾರತೀಯ ಗಡಿ ಭದ್ರತಾ ಪಡೆಗೆ ಸೇರಿದ್ದರು. ಒಂದು ವರ್ಷ ಟ್ರೈನಿಂಗ್ ಪೂರ್ಣಗೊಳಿಸಿ ಭಾರತ್ ಲೈನ್ ಆಫ್ ಕಂಟ್ರೋಲ್‌ಗೆ ಕರ್ತವ್ಯಕ್ಕೆ ಸೇರಿದ್ದರು. ಆ ಬಳಿಕ ಜಮ್ಮು ಕಾಶ್ಮೀರದ ರಜೌರಿಗೆ ಸೇರ್ಪಡೆಯಾದರು. ಸೆಪ್ಟಂಬರ್ ತಿಂಗಳ 2002 ನೇ ಇಸವಿಯಲ್ಲಿ ಪಾಕಿಸ್ತಾನದ ಉಗ್ರರು ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿ ಒಳನುಸುಳುವ ಯತ್ನದಲ್ಲಿದ್ದರು. ಆಗ ಹೆದರದೇ ಇಬ್ಬರು ಉಗ್ರರನ್ನು ಗುಂಡಿಕ್ಕಿ ಕೊಲ್ಲುವ ಮೂಲಕ ಭಾರತಕ್ಕೆ ಎದುರಾಗಬಹುದಾಗಿದ್ದ ಅನಾಹುತ ತಪ್ಪಿಸಿದ್ದರು.

ಜಮ್ಮು ಕಾಶ್ಮೀರದ ಅಂತರರಾಷ್ಟ್ರೀಯ ಗಡಿಯಲ್ಲಿ 2003ರಿಂದ 2006ರವರೆಗೆ ಕೆಲಸ ಮಾಡಿದ್ದರು. ಬಳಿಕ 2009ರವರೆಗೆ ಮೂರು ವರ್ಷ ರಾಜಸ್ತಾನದ ಬಾರ್ಮರ್ ಐಬಿಯಲ್ಲಿ ಸೇವೆ ಸಲ್ಲಿಸಿದ್ದರು. ನಂತರ ಛತ್ತೀಸ್ ಘಡದಲ್ಲಿ ಆ್ಯಂಟಿ ನಕ್ಸಲ್ ಆಪರೇಷನ್ ಸೆಲ್ ನಲ್ಲಿಯೂ ತಮ್ಮದೇ ಛಾಪು ಮೂಡಿಸಿದರು. ಈ ವೇಳೆ ನಕ್ಸಲರು ನೆಲದಲ್ಲಿ ಹೂತಿಟ್ಟಿದ್ದ ಬಾಂಬ್ ಗಳನ್ನು ಯಾವುದೇ ಆಯುಧ ಇಲ್ಲದಿದ್ದರೂ ಪತ್ತೆ ಹಚ್ಚಿದ ಕೀರ್ತಿಗೆ ಭಾಜನರಾಗಿದ್ದರು. ನಕ್ಸಲ್ ಎನ್ ಕೌಂಟರ್ ಮಾಡಿದ್ದಕ್ಕಾಗಿ ಬಿಎಸ್‌ಎಫ್ ನ ಅತ್ಯುನ್ನತ ಪದವಿ ಡೈರೆಕ್ಟರ್ ಜನರಲ್ ರೆಕಮಂಡೇಶನ್ ರೋಲ್ ನೀಡಿ ಗೌರವಿಸಲಾಗಿತ್ತು.

ಉದನ್ ಪುರದಲ್ಲಿ ಭಾರತೀಯ ಸೈನಿಕರು ರಸ್ತೆ ದಾಟುವ ವೇಳೆ ಬೆಟಾಲಿಯನ್ ನ ಬಾಂಬ್ ಕಳೆದು ಹೋಗಿದ್ದವು. ಆಗ ತಮ್ಮ ಚಾಕಚಕ್ಯತೆಯಿಂದ ಬಾಂಬ್ ಗಳನ್ನು ಹುಡುಕಿಕೊಟ್ಟ ಯೋಧ ಎಂಬ ಖ್ಯಾತಿಗೂ ಪಾತ್ರರಾಗಿದ್ದರು.

2015ರವರೆಗೆ ಮೂರು ವರ್ಷ ಬಿಸ್ಕಿನ್ ಐಬಿಯಲ್ಲಿ ಕೆಲಸ. ಮತ್ತೆ ಜಮ್ಮು ಕಾಶ್ಮೀರದ ರಜೌರಿಗೆ ಎಲ್ ಒಸಿಗೆ ನೇಮಕವಾದರು. ಬಳಿಕ ಮೂರೂವರೆ ವರ್ಷ ಸೈನ್ಯಕ್ಕೆ ಸೇರ್ಪಡೆಗೊಂಡವರಿಗೆ ಟ್ರೈನಿಂಗ್ ನೀಡುವ ಮೂಲಕ ಸಾವಿರಾರು ಸೈನಿಕರಿಗೆ ಟಿಪ್ಸ್ ಹೇಳಿಕೊಡುವ ಮೂಲಕ ಪ್ರೀತಿಯ ಮೇಸ್ಟ್ರಾಗಿ ಎಲ್ಲರ ಗಮನ ಸೆಳೆದಿದ್ದರು.

2019ರಿಂದ ಶ್ರೀನಗರದಲ್ಲಿ ವಿಐಪಿ ಕರ್ತವ್ಯಕ್ಕೆ ನಿಯುಕ್ತಿಗೊಂಡಿದ್ದ ಸುರೇಶ್ ಅವರ ಸೇವೆ ಪರಿಗಣಿಸಿ ಹವಾಲ್ದಾರ್ ಆಗಿ ಪ್ರಮೋಷನ್ ಕೊಡಲಾಗಿತ್ತು.

# ಸಂಪುಟ ವಿಸ್ತರಣೆ ಸಾಧ್ಯತೆ

**(1ನೇ ಪುಟದಿಂದ)** ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಬಂದಂತಹವರಲ್ಲಿ ಕೆಲವರನ್ನು ಕೈಬಿಡಲಾಗಿತ್ತು. ಸಂತೋಷ್ ಅವರ ಜೊತೆ ಸಮಾಲೋಚನೆ ಸಂದರ್ಭದಲ್ಲಿ ಪಟ್ಟಿ ಮಾಡಲಾಗಿದ್ದ ಶಿಫಾರಸ್ಸಿನಲ್ಲಿ ಕೆಲವು ಬದಲಾವಣೆ ಮಾಡಲಾಗಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ವಲಸಿಗರಲ್ಲಿ ಕೆಲವರನ್ನು ಕೈ ಬಿಟ್ಟರೆ ಕಾಂಗ್ರೆಸ್ ಇದನ್ನೇ ಆಧಾರವಾಗಿಟ್ಟುಕೊಂಡು ಬಿಜೆಪಿ ವಿರುದ್ಧ ಪ್ರಚಾರ ಮಾಡುತ್ತದೆ, ಇದಕ್ಕೆ ಅವಕಾಶ ನೀಡಬಾರದು ಎಂಬ ನಿರ್ಧಾರದ ಹಿನ್ನೆಲೆಯಲ್ಲಿ ಬಹುತೇಕ ವಲಸಿಗರು ಬೊಮ್ಮಾಯಿ ಸಂಪುಟದಲ್ಲಿ ಮುಂದುವರೆಯುವ ಸಂಭವವಿದೆ. ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಸಹಾ ಪಟ್ಟಿ ಸಿದ್ಧಪಡಿಸಲಾಗಿದೆ.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಅವರು, ಬುಧವಾರ ಇಲ್ಲವೇ ಗುರುವಾರ ಮಂತ್ರಿಮಂಡಲ ರಚನೆಯಾಗಲಿದೆ ಎಂಬ ಸುಳಿವು ನೀಡಿದರು.

ಯಡಿಯೂರಪ್ಪ ಸರ್ಕಾರದಲ್ಲಿದ್ದ ಸಚಿವರು ಮತ್ತು ಹೊಸಬರನ್ನು ಸೇರಿಸಿಕೊಂಡು ಸರಿದೂಗಿಸಿಕೊಂಡು ಸಂಪುಟ ರಚನೆಯಾಗಲಿದೆ. ಜಿಲ್ಲಾ ಮತ್ತು ಜಾತಿವಾರು ಗಮನದಲ್ಲಿಟ್ಟುಕೊಂಡು ಮೊದಲ ಹಂತದಲ್ಲಿ ಒಂದಷ್ಟು ಮಂದಿಯನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ ಎಂದಿದ್ದಾರೆ.

ಎಲ್ಲಾ ಶಾಸಕರನ್ನು ಮಂತ್ರಿ ಮಾಡಲು ಸಾಧ್ಯವಿಲ್ಲ, ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವ ಎಲ್ಲರಿಗೂ ಅವಕಾಶ ಸಿಗುವುದಿಲ್ಲ, ಇದು ನಮ್ಮ ಸದಸ್ಯರಿಗೂ ತಿಳಿದಿದೆ, ದೆಹಲಿಯಲ್ಲೇ ಬಿಡಾರ ಹೂಡಿರುವ ಮಾಜಿ ಸಚಿವರು ಹಾಗೂ ಶಾಸಕರನ್ನು ಭೇಟಿ ಮಾಡಿ ಚರ್ಚೆ ಮಾಡಿದ್ದೇನೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಬಗ್ಗೆ ವರಿಷ್ಠರು ತೀರ್ಮಾನ ಮಾಡುತ್ತಾರೆ. ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ಅಗತ್ಯವಿದ್ದು, ಇದನ್ನು ಗಮನದಲ್ಲಿಟ್ಟುಕೊಂಡು ಒಮ್ಮತದ ತೀರ್ಮಾನ ಆಗಲಿದೆ. ಎಲ್ಲವನ್ನೂ ಸರಿದೂಗಿಸಿಕೊಂಡು ಸಂಪುಟ ರಚನೆ ಮಾಡುವ ವಿಶ್ವಾಸವನ್ನು ಬಸವರಾಜ ಬೊಮ್ಮಾಯಿ ವ್ಯಕ್ತಪಡಿಸಿದರು.

# ಚಿಕ್ಕಮಜ್ಜಿಗೇರಿಯಲ್ಲಿ ಚಿರತೆ ಸೆರೆ

**(1ನೇ ಪುಟದಿಂದ)** ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ತೆರಳಿದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಚಿರತೆಯನ್ನು ಹಿಡಿದು ಕಾಡಿಗೆ ಬಿಡುವಲ್ಲಿ ಯಶಸ್ವಿಯಾಗಿದ್ದಾರೆ.


**ಮಾರಾಟಕ್ಕಿದೆ**
ನಗರದ ಹೃದಯ ಭಾಗದಲ್ಲಿ ಸುಮಾರು 10 ವರ್ಷ ಹಳೆಯ ಚಾಲ್ತಿಯಲ್ಲಿರುವ ಡಿಟಿಪಿ ಸೆಂಟರ್ ಫರ್ನೀಚರ್ ಸಹಿತ ಮಾರಾಟಕ್ಕಿದೆ. ಸಂಪರ್ಕಿಸಿ :
78924 66642

**Exchange Offer**
ನಮ್ಮಲ್ಲಿ ಎಲ್ಲಾ ತರಹದ ಸೊಳ್ಳೆ ಮೆಸ್ ಮತ್ತು ಕುಷನ್, ತಡಿ ಫರ್ನೀಚರ್ ಮಾಡುತ್ತೇವೆ ಮತ್ತು ರಿಪೇರಿ ಸಹ ಮಾಡುತ್ತೇವೆ.
(Exchange Offer ಇದೆ)
ಪ್ರದೀಪ್, ಆರ್.ಟಿ.ಒ ರೋಡ್
88614 38237

**Hotel Foodies**
ವೆಯ್ಟರ್, ಕ್ಯಾಪ್ಟನ್, ಕೌಂಟರ್ ಸರ್ವೀಸ್, ಬಿಲ್ಲಿಂಗ್‌ಗೆ ಬೇಕಾಗಿದ್ದಾರೆ.
ಸಂಪರ್ಕಿಸಿ
98861 56688
88614 12999

**HOUSE TO LET**
2 BHK, 2 Floor Furnished
Modern House
Vidyanagar Main Road
Opposite Post Office.
Contact : Anil
94498 33024

**ರೂಮ್ಸ್ ಬಾಡಿಗೆಗೆ ಇವೆ**
ದಾವಣಗೆರೆ ನಗರದ ಎಂಸಿಸಿ 'ಬಿ' ಬ್ಲಾಕ್ ನಲ್ಲಿ ಪ್ರತ್ಯೇಕ ಅಟ್ಯಾಚ್ ಬಾತ್ ರೂಮ್‌ವುಳ್ಳ ಮೂರು ರೂಮ್ ಗಳು ಬಾಡಿಗೆಗೆ ಇವೆ.
(Only For Ladies) ಸಂಪರ್ಕಿಸಿ
97427 67274,
93538 97342

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ನಗರದ ಎಸ್.ಎಸ್. ಬಡಾವಣೆಯ 'ಬಿ' ಬ್ಲಾಕ್, 3ನೇ ಕ್ರಾಸ್, 3 ನೇ 'ಎ' ಮೇನ್‌ನಲ್ಲಿ (ನೇತಾಜಿ ಒಳಾಂಗಣ ಕ್ರೀಡಾಂಗಣ ಹಿಂಭಾಗದಲ್ಲಿ) 2 ಬೆಡ್ ರೂಮ್ ಇರುವ ಕೆಳಮಹಡಿ ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ : 94484 90099

**ಜಮೀನು ಬೇಕಾಗಿದೆ**
ಹರಿಹರದಲ್ಲಿ ಜಮೀನು ಕೊಳ್ಳಲು ಬೇಕಾಗಿರುತ್ತದೆ.
74112 50447

**ಜಮೀನು ಮಾರಾಟಕ್ಕಿದೆ**
ಮರಡಿ ಗ್ರಾಮ ಸಂತೆಬೆನ್ನೂರು ಹೋಬಳಿ ಚನ್ನಗಿರಿ ತಾಲ್ಲೂಕಿಗೆ ಸೇರಿದ ಚಾನಲ್ ಪಕ್ಕದಲ್ಲಿರುವ ಸರ್ವೆ ನಂ: 81,82,83 ರಲ್ಲಿ ಒಟ್ಟಿಗೆ 4 ಎಕರೆ 32 ಗುಂಟೆ ಜಮೀನು ಮಾರಾಟಕ್ಕಿರುತ್ತದೆ. ಸದರಿ ಜಮೀನಿನಲ್ಲಿ 2 ಬೋರ್ ವೆಲ್ ಮತ್ತು ಸ್ವಂತ ಟಿ.ಸಿ. ಇರುತ್ತದೆ.
98456 92504, 98451 40948

**ಮನೆ ಮಾರಾಟಕ್ಕಿದೆ**
ಶಂಕರ್ ವಿಹಾರ್ ಬಡಾವಣೆ ಡೋರ್ ನಂ. 2836 ಬ್ಲಡ್ ಬ್ಯಾಂಕ್ ಹಿಂಭಾಗ 6ನೇ ಕ್ರಾಸ್ ಗ್ರೌಂಡ್ ಫ್ಲೋರ್ ಹಾಗೂ ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ ಇರುವ ಮುನಿಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
98455 20122

**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸ್ ಬಡಾವಣೆ ಸಿ ಬ್ಲಾಕ್ 1ನೇ ಕ್ರಾಸ್ ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರ ಡಬಲ್ ಬೆಡ್‌ರೂಂ ಮನೆ, 2ನೇ ಮಹಡಿ, ನಲ್ಲಿ ನೀರು ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ. ವಿಚಾರಿಸಿ
98458 40604
99805 32781

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
ಸೈಜ್ 20x80 (ಸೈಟ್ ನಂ.8), ಗುಜರಿ ಲೇಔಟ್ (ಸ್ಕ್ರ್ಯಾಪ್ ಲೇಔಟ್) ಅಖ್ಸಾ ಮಸ್ಜಿದ್ ಕಾಂಪ್ಲೆಕ್ಸ್ ಎದುರು ಮಾಗಾನಹಳ್ಳಿ ಮೇನ್ ರೋಡ್ (ಡಬಲ್ ರೋಡ್) ಜೆ.ಡಿ. ಎಸ್.ಆಫೀಸ್ ಹತ್ತಿರ, ದಾವಣಗೆರೆ.
83106 39057

**WANTED**
Lab Technician DMLT
Passed Can Apply
Contact :
98440 65638

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯುಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
72593 59861, 99863 45266

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**Avoid Mosquitoes**
Mosquito Net for Doors and Windows
Sri Gowri Enterprises
# 7C2, 4th Cross, Near D.C Office, Karuru Industrial Area, P.B. Road, Davanagere
72049 94628

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

**ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು.
ಸಿಟಿಜನ್ಸ್ ದಾ
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
93421 95459

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 04.08.2021ರ ಬುಧವಾರ ಮತ್ತು 05.08.2021ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**House To-Let**
2BHK 'Santrupthi'
# 1640/66-67, Saraswati Badavane, Davanagere.
Veg only
94484 46708

**SSLC/ PUC ಪಾಸ್/ ಫೇಲ್ ಮುಂದೇನು**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ -2 ವರ್ಷ
6 ತಿಂಗಳ ತರಬೇತಿ ನಂತರದಲ್ಲಿ ನರ್ಸ್ ಆಗಿ ಕೆಲಸ ಮಾಡ ಬಹುದು. ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಕೆಲವೇ ಸೀಟುಗಳಿವೆ ಸಂಪರ್ಕಿಸಿ
86602 35013

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**Fashion Designing**
ಟೈಲರಿಂಗ್ ಕಲಿಯಲು ಮತ್ತು ಆಸಕ್ತಿ ಇರುವವರಿಗೆ ಕಲಿಸಲಾಗುತ್ತದೆ.
ಟೈಲರಿಂಗ್ ಟೀಚರ್ ಬೇಕಾಗಿದ್ದಾರೆ
97408 15926

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**15 ದಿನಗಳಲ್ಲಿ ನೇರ ಪರಿಹಾರ**
ಬಿ.ಪಿ., ಶುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್ ವೇನ್, ನಿದ್ರಾ ಹೀನತೆ, ಸೊಂಟ, ಬೆನ್ನು ಮಂಡಿ ನೋವು, ಪಾದದಲ್ಲಿ ಉರಿ, ನೋವು, ಸ್ನಾಯು ಸೆಳೆತ, ಮಸಲ್ ಕ್ರ್ಯಾಂಪ್, ಬಾವು, ತೂಕದಲ್ಲಿ ಇಳಿಕೆ/ಏರಿಕೆ,
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಲಾಯರ್ ರಸ್ತೆ, ಬಂಧನ್ ಬ್ಯಾಂಕ್ ಹತ್ತಿರ, ದಾವಣಗೆರೆ.
86602 35013

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826


# ರಾಜ್ಯದಲ್ಲಿ ಕೊರೊನಾ ಇಳಿಕೆ

**(1ನೇ ಪುಟದಿಂದ)** ಪತ್ತೆಯಾಗಿ ದ್ದಾರೆ ಮತ್ತು ಇದೇ ದಿನ 25 ಜನ ಸಾವನ್ನಪ್ಪಿದ್ದಾರೆ. ಭಾನುವಾರ ರಾಜ್ಯದಲ್ಲಿ 1,875 ಕೊರೊನಾ ಸೋಂಕಿತರು ಪತ್ತೆಯಾಗಿದ್ದರು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಈಗ ಸಕ್ರಿಯ ಸೋಂಕಿತರ ಸಂಖ್ಯೆ 24,021 ಆಗಿದೆ. ಸೋಮವಾರ 1,838 ಜನ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಬೆಂಗಳೂರಿನಲ್ಲಿ 290 ಸೋಂಕಿತರು ಕಂಡು ಬಂದಿದ್ದು, ಐವರು ಸಾವನ್ನಪ್ಪಿದ್ದಾರೆ.

ರಾಜ್ಯದ 10 ಜಿಲ್ಲೆಗಳಿಂದ ಕೊರೊನಾ ಸಾವುಗಳು ವರದಿಯಾಗಿವೆ. 20 ಜಿಲ್ಲೆಗಳಲ್ಲಿ ಯಾವುದೇ ಸಾವು ಸಂಭವಿಸಿಲ್ಲ.

# ಸಾಲ ಮನ್ನಾ ಪ್ರಸ್ತಾವನೆ ಇಲ್ಲ

**(1ನೇ ಪುಟದಿಂದ)** ನೀಡಿರುವ ಹಣಕಾಸು ಖಾತೆ ಅಧೀನ ಸಚಿವ ಭಗವತ್ ಕರಾಡ್, 2008ರಲ್ಲಿ ಸಾಲ ಮನ್ನಾ ಮಾಡಿದ ನಂತರ ಬೇರೆ ಯಾವುದೇ ಸಾಲ ಮನ್ನಾ ಮಾಡುವ ಪ್ರಸ್ತಾವನೆಯನ್ನು ಪರಿಗಣಿಸಲಾಗಿಲ್ಲ ಎಂದಿದ್ದಾರೆ.

# 3ನೇ ಅಲೆ ತಡೆ ಪ್ರಾಥಮಿಕ ಕೆಲಸ

**(1ನೇ ಪುಟದಿಂದ)** ಒಳಗೆ ಬಿಡಬೇಕು. ರಾಜ್ಯದಲ್ಲಿ ಸೋಂಕು ಚಿಕಿತ್ಸೆಗೆ ಸುಸಜ್ಜಿತ ಆಸ್ಪತ್ರೆ, ಹಾಸಿಗೆಗಳು, ವೆಂಟಿಲೇಟರ್, ಆಕ್ಸಿಜನ್ ಇರುವಂತೆ ನೋಡಿಕೊಳ್ಳಬೇಕು. ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್ ಹೇರುವಂತಹ ಪರಿಸ್ಥಿತಿ ನಿರ್ಮಾಣವಾಗದಂತೆ ಸರ್ಕಾರ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಳೆದೆರಡು ದಿನಗಳಿಂದ ಸೋಂಕಿನ ಪ್ರಮಾಣ ಎರಡು ಸಾವಿರ ಸಮೀಪಿಸುತ್ತಿದೆ, ಎರಡು ಸಾವಿರದ ಗಡಿ ದಾಟಿದರೆ ಮೂರನೇ ಅಲೆ ಶುರುವಾಯಿತು ಎಂದರ್ಥ ಎಂದರು.

ಸೋಂಕು ನಿಯಂತ್ರಣ ಕಾರ್ಯಗಳಿಗೆ ಗಮನ ಕೊಡದೆ ಮುಖ್ಯಮಂತ್ರಿ, ಸಂಪುಟ ರಚನೆಯಲ್ಲಿ ನಿರತರಾಗಿ ದೆಹಲಿಗೆ ಓಡಾಡುತ್ತಿದ್ದಾರೆ, ಪದೇ ಪದೇ ದೆಹಲಿಗೆ ಹೋಗುವ ಅಗತ್ಯವೇನಿದೆ. ಆ ಪಕ್ಷದ ಹೈಕಮಾಂಡ್ ರಾಜ್ಯದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಬಿಜೆಪಿ ಶಾಸಕರು ಬೆಂಗಳೂರಿನಲ್ಲಿ ಠಿಕಾಣಿ ಹೂಡಿ, ಮಂತ್ರಿ ಪದವಿಗಾಗಿ ಲಾಬಿ ಮಾಡುತ್ತಿದ್ದಾರೆ, ಶಾಸಕರು ತಮ್ಮ ಕ್ಷೇತ್ರಕ್ಕೆ ಹೋಗಿ ಕೆಲಸ ಮಾಡುತ್ತಿಲ್ಲ, ಜನರ ಜೀವಕ್ಕಿಂತ ಮಂತ್ರಿಯಾಗುವುದೇ ಮುಖ್ಯವಾಗಿದೆ. ಬೊಮ್ಮಾಯಿ ಈಗಷ್ಟೇ ಮುಖ್ಯಮಂತ್ರಿ ಆಗಿದ್ದಾರೆ, ಅವರ ಬಗ್ಗೆ ಟೀಕೆ ಮಾಡುವುದಿಲ್ಲ, ಆದರೆ, ರಾಜ್ಯದ ಸಮಸ್ಯೆಗಳ ಬಗ್ಗೆ ಗಮನ ಕೊಡಲು ಒತ್ತಾಯಿಸುತ್ತೇನೆ ಎಂದವರು ತಿಳಿಸಿದರು.


# ಇಂದು ಸಚಿವರ ಪಟ್ಟಿ ನಿರ್ಧಾರ

**(1ನೇ ಪುಟದಿಂದ)** ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, ವಲಸಿಗರೂ ಸಹ ನಮ್ಮವರೇ. ಅವರು ವಲಸಿಗರಲ್ಲ, ನೆಲೆಸಿಗರು. ಅವರು ಬಿಜೆಪಿ ಒಟ್ಟು ಪರಿವಾರದವರು. ಸೇರ್ಪಡೆ ಬಗ್ಗೆ ನಾಳೆ ನಿರ್ಧಾರವಾಗಲಿದೆ ಎಂದು ಹೇಳಿದರು.

ನಮ್ಮ ಎಲ್ಲ ವಿಚಾರಗಳನ್ನು ತಿಳಿಸಿದ್ದೇವೆ. ಪ್ರಾದೇಶಿಕ ಹಾಗೂ ಸಾಮಾಜಿಕ ಸಮತೋಲನ ಸೇರಿ ಹಲವು ವಿಷಯಗಳು ಚರ್ಚೆಯಾಗಿವೆ ಎಂದ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ವಿಜಯೇಂದ್ರ ಅವರು ಸಂಪುಟ ಸೇರುವ ಬಗ್ಗೆ ಯಾವುದೇ ಹೇಳಿಕೆ ನೀಡಲು ಬಯಸಲಿಲ್ಲ.

ನಾಳೆ ವರಿಷ್ಠರು ಸಚಿವರ ಪಟ್ಟಿ ಪ್ರಕಟಿಸಿದ ನಂತರ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಜೊತೆ ಚರ್ಚಿಸಿ ಪ್ರಮಾಣ ವಚನ ಸ್ವೀಕಾರದ ದಿನಾಂಕ ನಿಗದಿ ಪಡಿಸಲಾಗುವುದು ಎಂದು ಬೊಮ್ಮಾಯಿ ಹೇಳಿದ್ದಾರೆ.

# ನಿಜವಾದ ಗುರುಗಳೇ ನಡೆದಾಡುವ ದೇವರುಗಳು: ಶಿವಯೋಗಿ ಶ್ರೀಗಳು




ರಾಣೇಬೆನ್ನೂರು, ಆ.2- ಸಮಾಜದಲ್ಲಿರುವ ಎಲ್ಲ ವರ್ಗದ ಜನರ ಅಂಧಕಾರವನ್ನು ಹೋಗಲಾಡಿಸಿ, ಅವರನ್ನು ಬೆಳಕಿನೆಡೆಗೆ ಕೊಂಡೊಯ್ಯುವ ಮೂಲಕ ಭೇದ-ಭಾವ ಮರೆತು ನಿಸ್ವಾರ್ಥದಿಂದ ಸೇವೆ ಸಲ್ಲಿಸಿ ಸರ್ವರನ್ನು ಸಜ್ಜನರನ್ನಾಗಿಸುವ ಕಾಯಕ ಮಾಡುವ ನಿಜವಾದ ಗುರುಗಳೇ ನಡೆದಾಡುವ ದೇವರುಗಳಾಗಿದ್ದಾರೆ ಎಂದರೆ ತಪ್ಪಾಗದು ಎಂದು ಶ್ರೀಮಠದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಹೊರವಲಯದಲ್ಲಿರುವ ಹಿರೇಮಠದ ಶನೈಶ್ಚರ ಸ್ವಾಮಿ ಮಂದಿರದಲ್ಲಿ ಗುರು ಪೂರ್ಣಿಮೆ ನಿಮಿತ್ಯ ಶಿಷ್ಯ ಹಾಗೂ ಭಕ್ತ ವೃಂದದವರು ಏರ್ಪಡಿಸಿದ್ದ ಗುರು ಪಾದ ಪೂಜೆ- ಗುರು ನಮನ ಸ್ವೀಕರಿಸಿ, ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಹಣ ಸೇರಿದಂತೆ ಮೋಹ ಬಯಸುವ ಯಾವ ಗುರುಗಳು ನಿಜವಾದ ಗುರುಗಳಾಗುವುದಿಲ್ಲ. ಅಂತವರನ್ನು ಸಮಾಜವು ಗುರುತಿಸುವುದಿಲ್ಲ. ಹಣೆಬರಹವನ್ನು ಬದಲಿಸುವ ದಿವ್ಯಶಕ್ತಿ ಗುರುಗಳಲ್ಲಿದೆ. ಅಂತಹ ಗುರುಗಳಿಂದ ಪ್ರೀತಿ, ವಿಶ್ವಾಸ ಪಡೆದು ಜ್ಞಾನವಂತರಾಗಬೇಕು. ದುಡ್ಡಿನಿಂದ ಗುರುಗಳನ್ನು ಓಲೈಸಿದರೆ ನಿಜವಾದ ಗುರುಗಳು ಎಂದಿಗೂ ಸಿಗಲಾರರು. ಗುರುಕಾರುಣ್ಯವಿಲ್ಲದೇ ಯಾರ ಜೀವನವು ಪಾವನವಾಗದು, ಗುರುಗಳಾದವರು ಸರ್ವರನ್ನು ಏಕೋಭಾವನೆಯಿಂದ ಕಾಣುವ ಮಹಾನ್‌ಗುಣ ಹೊಂದಿರಬೇಕು ಎಂದರು.

ಪುನೀತ, ಗುದ್ಲೇಶ್ವರ, ಪರಮೇಶ್ವರ, ವೀರೇಶ್, ದಾನಯ್ಯ, ಮಲ್ಲಿಕಾರ್ಜುನ್, ದಾನೇಶ್, ಸಚಿನ್, ಬಸವರಾಜ್ ಸೇರಿದಂತೆ ಮತ್ತಿತರೆ ಶಾಸ್ತ್ರಿಗಳು, ಪಾಠಶಾಲಾ ವಟುಗಳು ಭಕ್ತರು, ಶಿಷ್ಯಂದಿರು ಮತ್ತಿತರರು ಇದ್ದರು.

# ಸ್ಪರ್ಶ ಫೌಂಡೇಶನ್‌ನಿಂದ ಉಚಿತ ಶಸ್ತ್ರಚಿಕಿತ್ಸೆ

ದಾವಣಗೆರೆ, ಆ.2 - ಸ್ಪರ್ಶ ಫೌಂಡೇಶನ್ ವತಿಯಿಂದ ಇದೇ ಇದೇ ದಿನಾಂಕ 5 ರಂದು ನಗರದ ಎಂಸಿಸಿ ಎ ಬ್ಲಾಕ್‌ನ ಮೋದಿ ಕಾಂಪೌಂಡ್‌ನಲ್ಲಿರುವ ಎಸ್‌ಎಸ್ ಸ್ಪೆಷಾಲಿಟಿ ಕ್ಲಿನಿಕ್‌ನಲ್ಲಿ ಕೀಲು ಮತ್ತು ಮೂಳೆ ಅಥವಾ ವಿವಿಧ ನ್ಯೂನತೆಯಿಂದ ಬಳಲುತ್ತಿರುವ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಡಾ.ಶರಣ್ ಪಾಟೀಲ್ ಸ್ಥಾಪಿಸಿರುವ ಸ್ಪರ್ಶ ಆಸ್ಪತ್ರೆಯ ಸೇವಾ ವಿಭಾಗವಾಗಿರುವ ಸ್ಪರ್ಶ ಫೌಂಡೇಶನ್ ವತಿಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಮಕ್ಕಳ ಬದುಕನ್ನು ಸುಖಮಯವಾಗಿಸಬೇಕೆಂಬ ಹಂಬಲದ ಫಲವಾಗಿ ರೂಪುಗೊಂಡ ಸಂಸ್ಥೆಯಿಂದ 200 ಕ್ಕೂ ಅಧಿಕ ಮಕ್ಕಳಿಗೆ ಸಂಪೂರ್ಣ ಉಚಿತ ಶಸ್ತ್ರ ಚಿಕಿತ್ಸಾ ಸೌಲಭ್ಯ ಒದಗಿಸುವುದು ಯೋಜನೆಯ ಉದ್ದೇಶವಾಗಿದೆ ಎಂದು ಸಂಸ್ಥೆ ಪ್ರಕಟಣೆ ತಿಳಿಸಿದೆ.

ಪ್ರತಿ ವರ್ಷ ನಡೆಯುವ 'ಸ್ಪರ್ಶ ವಚನ' ವೈದ್ಯಕೀಯ ಸೇವಾ ಯೋಜನೆ ಪ್ರಾರಂಭಗೊಂಡ 12 ವರ್ಷಗಳಲ್ಲಿ 2 ಸಾವಿರ ಮಕ್ಕಳಿಗೆ ಉಚಿತ ಯಶಸ್ವೀ ಶಸ್ತ್ರ ಚಿಕಿತ್ಸೆ ನೀಡಲಾಗಿದೆ. ಈ ವಿಶೇಷ ಸೇವೆಗಾಗಿಯೇ ಪ್ರಪಂಚದ ಮೂಲೆ ಮೂಲೆಗಳಿಂದ ಪರಿಣಿತ ವೈದ್ಯರು, ಆಡಳಿತ ತಜ್ಞರು, ದಾದಿಯರು ಸ್ವಯಂ ಸೇವಾಭಾವನೆಯಿಂದ ಆಗಮಿಸಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಈ ಯೋಜನೆಯ ಫಲಾನುಭವಿಗಳು ನೂರಾರು ಮಕ್ಕಳು ಎನ್ನುವುದು ದೊಡ್ಡ ಸಂಗತಿಯಾಗಿದೆ ಎಂದು ಸಂಸ್ಥೆ ತಿಳಿಸಿದೆ.

**ಆಯ್ಕೆ ನಿಯಮಾವಳಿಗಳು-ಮೂಳೆ ಸಂಬಂಧಿತ ಚಿಕಿತ್ಸೆ:-** ವಕ್ರಪಾದ, ಬೆನ್ನುಹುರಿ ದುರ್ಬಲತೆ, ಕೈ ದುರ್ಬಲತೆ , ಸೆರೆಬ್ರಲ್ ಪಾಲ್ಸಿ , ಪೋಸ್ಟ್ ಪೋಲಿಯೋ ಡಿಫಾರ್ಮಿಟಿ, ಪೋಸ್ಟ್ ಬರ್ನ್ ಕಾನ್‌ಟ್ರಕ್‌ಚರ್, ಸಮಸ್ಯೆಗಳಿಗೆ ತಪಾಸಣೆ ಮಾಡಲಾಗುತ್ತದೆ. ವಿವರಕ್ಕೆ ಸಂಪರ್ಕಿಸಿ 96869 29090 / 99162 94908.

# ಹರಿಹರ : ನೀರಿನ ಪೈಪ್ ದುರಸ್ತಿಗೆ ಕ್ರಮ ಕೈಗೊಂಡ ಅಧಿಕಾರಿಗಳು



ಹರಿಹರ, ಆ.2- ನಗರದ ಶಿವಮೊಗ್ಗ ರಸ್ತೆಯ ಸೇತುವೆ ಮೇಲೆ ಹಾದು ಹೋಗಿರುವ 24/7 ಕುಡಿಯುವ ನೀರಿನ ಸರಬರಾಜು ಪೈಪ್ ಒಡೆದಿದ್ದ ಕಾರಣ ವಿವಿಧ ಬಡಾವಣೆಯ ನಾಗರಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ, ಪತ್ರಿಕೆಗಳ ವರದಿಯಿಂದ ಎಚ್ಚೆತ್ತ ನಗರಸಭೆ ಅಧಿಕಾರಿಗಳು ತಕ್ಷಣ ಸ್ಪಂದಿಸಿ, ಪೈಪ್ ದುರಸ್ತಿಗೆ ಕ್ರಮ ಕೈಗೊಂಡಿದ್ದಾರೆ.

ಹಲವು ದಿನಗಳಿಂದ ಪೈಪ್ ಒಡೆದು ನೀರು ರಸ್ತೆಯಲ್ಲಿ ಹರಿದು ಪೋಲಾಗುತ್ತಿತ್ತು. ವಿದ್ಯಾನಗರ, ಹೈಸ್ಕೂಲ್ ಬಡಾವಣೆ, ಮೋಚಿ ಕಾಲೋನಿ, ಬೆಂಕಿನಗರ, ಕಾಳಿದಾಸ ನಗರ ಸೇರಿದಂತೆ ಹಲವು ಬಡಾವಣೆಗಳ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗುತ್ತಿತ್ತು. ಪೈಪ್ ದುರಸ್ತಿ ಮಾಡಲು ಮುಂದಾಗಿರುವ ಅಧಿಕಾರಿಗಳು, ಹಳೆಯ ಪೈಪ್ ತೆಗೆದು ಹೊಸದಾಗಿ ಪೈಪ್ ಅಳವಡಿಸಿದ್ದಾರೆ. ಇಸ್ಮಾಯಿಲ್, ವಿಜಯಕುಮಾರ್ ಇನ್ನಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

# ವಿಮಾ ತಿದ್ದುಪಡಿ ಮಸೂದೆ ಒಪ್ಪಿಗೆ

**(1ನೇ ಪುಟದಿಂದ)** ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಸೂದೆ ಮಂಡಿಸಿ ಮಾತನಾಡುತ್ತಾ, ಮಸೂದೆಯ ಕುರಿತು ಪ್ರತಿಪಕ್ಷಗಳ ಕಳವಳಕ್ಕೆ ಉತ್ತರಿಸಲು ಸಿದ್ಧವಾಗಿದ್ದೇನೆ. ಆದರೆ, ಗದ್ದಲದ ಕಾರಣದಿಂದಾಗಿ ಉತ್ತರ ನೀಡಲು ಸಾಧ್ಯವಾಗುತ್ತಿಲ್ಲ ಎಂದರು.

ಪ್ರತಿಪಕ್ಷಗಳು ಗದ್ದಲ ನಡೆಸುತ್ತಾ ಚರ್ಚೆಯನ್ನು ತಪ್ಪಿಸುತ್ತಿವೆ ಎಂದು ಆರೋಪಿಸಿದ ಅವರು, ಈ ವಿಷಯದ ಬಗ್ಗೆ ಗಂಭೀರವಾಗಿದ್ದರೆ ಕುಳಿತು ಚರ್ಚೆಗೆ ಅವಕಾಶ ನೀಡಬೇಕು ಹಾಗೂ ಪ್ರಶ್ನಿಸಬೇಕು. ಸತ್ಯಕ್ಕೆ ಹೆದರುತ್ತಿರುವ ಕಾರಣ ಚರ್ಚೆಗೆ ಅವಕಾಶ ನೀಡುತ್ತಿಲ್ಲ ಎಂದರು.

ಈ ತಿದ್ದುಪಡಿ ಜನ ವಿರೋಧಿ ಹಾಗೂ ದೇಶ ವಿರೋಧಿ ಎಂಬ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಮಾಡಿದ ಆರೋಪ ತಳ್ಳಿ ಹಾಕಿದ ಸೀತಾರಾಂ, ಖಾಸಗಿ ವಲಯದ ಕಂಪನಿಗಳು ಕಡಿಮೆ ಕಂತಿಗೆ ಉತ್ತಮ ವಿಮೆ ನೀಡುತ್ತಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಚೌಧರಿ ಹಾಗೂ ಸಚಿವೆ ನೀಡಿದ ಕೆಲ ಹೇಳಿಕೆಗಳನ್ನು ಲೋಕಸಭಾಧ್ಯಕ್ಷರ ನಿರ್ದೇಶನದಂತೆ ಕಡತದಿಂದ ತೆಗೆದು ಹಾಕಲಾಯಿತು.

ಈ ತಿದ್ದುಪಡಿ ಮೂಲಕ ಕೇಂದ್ರ ಸರ್ಕಾರ ನಿರ್ದಿಷ್ಟ ವಿಮಾ ಕಂಪನಿಯಲ್ಲಿ ಶೇ.51ಕ್ಕಿಂತ ಹೆಚ್ಚು ಪಾಲುಗಾರಿಕೆ ಹೊಂದಿರಬೇಕು ಎಂಬ ಷರತ್ತನ್ನು ತೆಗೆದು ಹಾಕಲಾಗುತ್ತಿದೆ. ಆ ಮೂಲಕ ಸರ್ಕಾರಿ ವಿಮಾ ಕಂಪನಿಗಳಲ್ಲಿ ಹೆಚ್ಚಿನ ಖಾಸಗಿ ಸಹಭಾಗಿತ್ವಕ್ಕೆ ಅನುಮತಿ ನೀಡಲಾಗುತ್ತಿದೆ.

# ಶೇ.5ರ ರಿಯಾಯಿತಿ ಆ.31 ಕ್ಕೆ ವಿಸ್ತರಣೆ

**(1ನೇ ಪುಟದಿಂದ)** ಪರಿಣಾಮದಿಂದಾಗಿ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿರುವ ಕಾರಣ ಮತ್ತು ಸಾರ್ವಜನಿಕರ ಆರ್ಥಿಕ ಹಿತದೃಷ್ಟಿಯಿಂದ ಜುಲೈ 31 ರವರೆಗೆ ಇದ್ದ ಶೇ.5ರ ರಿಯಾಯಿತಿಯ ಕಾಲಾವಧಿಯನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ. ನಿಗದಿತ ಅವಧಿಯಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸದಿದ್ದಲ್ಲಿ ಸೆಪ್ಟಂಬರ್ 1 ರಿಂದ ಮಾಸಿಕ ಶೇ.2 ರಷ್ಟು ದಂಡವನ್ನು ವಿಧಿಸಲಾಗುತ್ತದೆ ಎಂದು ಅವರು ತಮ್ಮ ಆದೇಶದಲ್ಲಿ ವಿವರಿಸಿದ್ದಾರೆ.

## ಓದುಗರ ಪತ್ರ

# ಈ ಬಾರಿ ಸಂಪುಟ ವಿಸ್ತರಣೆಯಲ್ಲಿಯೂ ಜಿಲ್ಲೆಗೆ ಸಚಿವ ಸ್ಥಾನ ಮರೀಚಿಕೆಯೇ ?

**ಮಾನ್ಯರೇ,**

ನೂತನ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ತಮ್ಮ ಸಂಪುಟ ವಿಸ್ತರಣೆಯ ಕಸರತ್ತನ್ನು ನಡೆಸುತ್ತಿದ್ದು, ಈಗಿನ ವಾತಾವರಣ ನೋಡಿದರೆ ಈ ಬಾರಿಯೂ ಸಚಿವ ಸ್ಥಾನ ನಮ್ಮ ಜಿಲ್ಲೆಗೆ ಮರೀಚಿಕೆಯೇ ಎಂಬ ಅನುಮಾನ ಬಾರದೇ ಇರದು...

ನಮ್ಮ ಜಿಲ್ಲೆಯಿಂದ ಐದು ಜನ ಬಿಜೆಪಿ ಶಾಸಕರು ಲಿಂಗಾಯತ ಸಮುದಾಯದ 3 (ಸಾಧು ಲಿಂಗಾಯತ 2 ಜಂಗಮ 1) ಎಸ್ಸಿ 1, ಎಸ್ಟಿ 1 ಇದ್ದು, ಲಿಂಗಾಯತ ಸಮುದಾಯದ ಒಳಪಂಗಡ ಸಾಧು ಲಿಂಗಾಯತ ಸಮುದಾಯದವರೇ ಮುಖ್ಯಮಂತ್ರಿಗಳು ಆಗಿರುವುದರಿಂದ ಹಾಗೂ ಪಕ್ಷಾಂತರ ಮಾಡಿಕೊಂಡು ಬಂದು ಸರ್ಕಾರ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಬಿ.ಸಿ. ಪಾಟೀಲ್ ಕೂಡ ಈ ಸಮುದಾಯದವರೇ ಆಗಿರುವುದರಿಂದ ಅವರಿಗೆ ಸಚಿವ ಸ್ಥಾನ ನೀಡುವ ಅನಿವಾರ್ಯತೆ ಇದ್ದು, ಜಿಲ್ಲೆಯ ಇಬ್ಬರು ಸಾಧು ಲಿಂಗಾಯತ ಶಾಸಕರಿಗೆ ಸಚಿವ ಸ್ಥಾನ ದೊರೆಯುವ ಅವಕಾಶ ಕಡಿಮೆ ಎನ್ನಲಾಗುತ್ತಿದೆ. ಇನ್ನು ಮತ್ತೊಬ್ಬ ಶಾಸಕರು ಕೋರ್ಟ್‌ನಿಂದ ಸಿಡಿ ಪ್ರಸಾರಕ್ಕೆ ತಡೆಯಾಜ್ಞೆ ತಂದಿರುವುದು ಅವರನ್ನು ಸಂಪುಟಕ್ಕೆ ತೆಗೆದುಕೊಳ್ಳಲು ಅಡಚಣೆಯಾಗಿದೆ ಎನ್ನಲಾಗುತ್ತಿದೆ.

ಒಬ್ಬ ಎಸ್ಸಿ ಶಾಸಕರಿದ್ದರೂ ಅವರು ಪ್ರಥಮ ಬಾರಿ ಆಯ್ಕೆಯಾಗಿರುವುದರಿಂದ ಅವಕಾಶ ಕಡಿಮೆ ಎನ್ನಲಾಗುತ್ತಿದೆ. ಎಲ್ಲರ ನಡುವೆ ಮೂರು ಬಾರಿ ಆಯ್ಕೆಯಾಗಿರುವ ಎಸ್ಟಿ ಸಮುದಾಯದ ಎಸ್.ವಿ.ರಾಮಚಂದ್ರಪ್ಪ ಅವರಿಗೆ ಅವಕಾಶ ದೊರೆತರೂ ಆಶ್ಚರ್ಯವಿಲ್ಲ ಎನ್ನಲಾಗುತ್ತಿದ್ದು, ರಾಜ್ಯಮಟ್ಟದಲ್ಲಿ ಬಿ.ಶ್ರೀರಾಮುಲು, ಬಾಲಚಂದ್ರ ಜಾರಕಿಹೊಳಿ ಅಂತಹ ಘಟಾನುಘಟಿ ನಾಯಕರುಗಳು ಎಸ್ಟಿ ಕೋಟಾದಡಿ ಸಚಿವರಾದರೆ, ಇವರ ಆಯ್ಕೆ ತಪ್ಪಬಹುದು ಎನ್ನಲಾಗುತ್ತಿದೆ. ಇದನ್ನೆಲ್ಲಾ ನೋಡಿದರೆ ಅಂತಿಮವಾಗಿ ದಾವಣಗೆರೆ ಜಿಲ್ಲೆಗೆ ಸಚಿವ ಸ್ಥಾನ ಮರೀಚಿಕೆಯೇ ?

**- ಕೆ.ಎಲ್.ಹರೀಶ್ ಬಸಾಪುರ**

# ಅವೈಜ್ಞಾನಿಕ ಆಸ್ತಿ ತೆರಿಗೆ ಹೆಚ್ಚಳ ಕೈ ಬಿಡದಿದ್ದರೆ ಹೋರಾಟ ನಿಶ್ಚಿತ

ದಾವಣಗೆರೆ, ಆ. 2- ಪಾಲಿಕೆಯಿಂದ ಅವೈಜ್ಞಾನಿಕವಾಗಿ ಆಸ್ತಿ ತೆರಿಗೆ ಹೆಚ್ಚಳ ಮಾಡಿರುವುದನ್ನು ತೀವ್ರವಾಗಿ ಖಂಡಿಸಿರುವ ಜಿಲ್ಲಾ ಕಾಂಗ್ರೆಸ್, ಶೀಘ್ರವೇ ರದ್ದು ಪಡಿಸಿ ಹಿಂದಿನ ಆಸ್ತಿ ತೆರಿಗೆಯನ್ನೇ ಮುಂದುವರೆಸಬೇಕು. ಇಲ್ಲದಿದ್ದರೆ ಹೋರಾಟ ನಡೆಸುವುದು ಶತಃಸಿದ್ಧ ಎಂದು ಎಚ್ಚರಿಸಿದೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಖಾಲಿ ನಿವೇಶನಗಳಿಗೆ ಉಪ ನೋಂದಣಾಧಿಕಾರಿಗಳ ಕಚೇರಿಯ ಎಸ್.ಆರ್. ದರದ ಮೇಲೆ ಕಂದಾಯ ಹೆಚ್ಚಿಸಲಾಗಿದ್ದು, ಕಳೆದ ವರ್ಷ 1 ಸಾವಿರ ರೂ. ಕಂದಾಯ ಕಟ್ಟಿದವರು ಈ ಬಾರಿ 5 ಸಾವಿರ ರೂ. ಪಾವತಿಸಬೇಕಾಗಿದೆ. ಕೊರೋನಾ ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ಇದರಿಂದ ಆರ್ಥಿಕ ಹೊರೆಯಾಗಿದೆ ಎಂದು ಹೇಳಿದರು.

ಮನೆಗಳು, ವಾಣಿಜ್ಯ ಕಟ್ಟಡಗಳು, ಕೈಗಾರಿಕಾ ಕಟ್ಟಡಗಳ ಸುತ್ತ ಸಾವಿರ ಅಡಿಗೂ ಹೆಚ್ಚಿನ ಜಾಗಕ್ಕೆ ತೆರಿಗೆ ವಿಧಿಸಲಾಗುತ್ತಿದ್ದು, ಇದೊಂದು ಅವೈಜ್ಞಾನಿಕ ಕ್ರಮ. ಇದನ್ನು ಕೈ ಬಿಡುವಂತೆ ಅವರು ಆಗ್ರಹಿಸಿದರು. ನಗರಕ್ಕೆ ಹರಿಹರದಿಂದ ನೇರವಾಗಿ ಅಶುದ್ಧ ನೀರು ಪೂರೈಕೆ ಮಾಡಲಾಗುತ್ತಿದೆ. ಮಳೆಗಾಲದಲ್ಲೂ ಕೆರೆಗಳಿಗೆ ನೀರು ಸಂಗ್ರಹಿಸಿಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ಕನಿಷ್ಟ ಪಕ್ಷ ನೀರನ್ನು ಕಾಯಿಸಿ ಕುಡಿಯಿರಿ ಎಂದು ಜನತೆಗೆ ಹೇಳುವ ಅರಿವೂ ಪಾಲಿಕೆ ಅಧಿಕಾರಿಗಳಿಗೆ, ಮೇಯರ್‌ಗಳಿಗೆ ಇಲ್ಲ ಎಂದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ಆಸ್ತಿ ತೆರಿಗೆಯನ್ನು ಕನಿಷ್ಟ ಶೇ.15ರಿಂದ ಗರಿಷ್ಟ ಶೇ.30ರೊಳಗೆ ಹೆಚ್ಚಿಸಬೇಕಿತ್ತು. ಆದರೆ ಪಾಲಿಕೆಯಿಂದ ವಸತಿ ನಿವೇಶನಗಳಿಗೆ ಶೇ.18ರಷ್ಟು ಹಾಗೂ ವಾಣಿಜ್ಯ ನಿವೇಶನಗಳಿಗೆ ಶೇ.24ರಷ್ಟು ಹೆಚ್ಚು ಮಾಡಲಾಗಿದೆ. ಇದು ಜನತೆಗೆ ತೀವ್ರ ಹೊರೆಯಾಗಿದೆ. ಇದನ್ನು ಪುನರ್ ಪರಿಶೀಲಿಸಬೇಕು. ಆಸ್ತಿ ತೆರಿಗೆ ಚರ್ಚೆ ಬಗ್ಗೆಯೇ ಪ್ರತ್ಯೇಕವಾಗಿ ಪಾಲಿಕೆ ಮಾನ್ಯ ಸಭೆ ನಡೆಸುವಂತೆ ಮನವಿ ಮಾಡಲಾಗಿದೆ ಎಂದು ಹೇಳಿದರು.

**ಪೂರ್ತಿ ಹೆಲ್ಮೆಟ್ ಬೇಡ:** ಕೊರೊನಾದಿಂದ ಸಂಕಷ್ಟದಲ್ಲಿರುವ ಜನರು ಸುಮಾರು 2 ಸಾವಿರ ರೂ. ಮೌಲ್ಯದ ಪೂರ್ಣ ಹೆಲ್ಮೆಟ್ ಕೊಳ್ಳಲು ಕಷ್ಟ. ಆದ್ದರಿಂದ ಐ.ಎಸ್.ಐ. ಗುಣಮಟ್ಟದ ಅರ್ಧ ಹೆಲ್ಮೆಟ್ ಧರಿಸಲು ಅವಕಾಶ ನೀಡುವಂತೆ ಮನವಿ ಮಾಡಿರುವ ನಾಗರಾಜ್, ಈ ಬಗ್ಗೆ ಪಾಲಿಕೆ ಸದಸ್ಯರೆಲ್ಲರೂ ಸೇರಿ ಎಸ್ಪಿ ಅವರಿಗೆ ಮನವಿ ಸಲ್ಲಿಸುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅನಿತಾಬಾಯಿ ಮಾಲತೇಶ್ ಜಾಧವ್, ಅಯೂಬ್ ಪೈಲ್ವಾನ್, ಸುಷ್ಮಾ ಪಾಟೀಲ್, ಯತಿರಾಜ್ ಮಠದ್, ಶಶಿಧರ ಪಾಟೀಲ್, ಜಬ್ಬಾರ್, ಹರೀಶ್ ಬಸಾಪುರ, ಮನೋಜ್ ಕುಮಾರ್, ಶ್ರೀಕಾಂತ್ ಬಗರೆ, ಸೋಹೆಲ್, ಸೋಹೆಲ್, ಅಣ್ಣೇಶ್ ಇತರರು ಉಪಸ್ಥಿತರಿದ್ದರು.

# ಸಚಿವ ಸಂಪುಟದಲ್ಲಿ ಜಿಲ್ಲೆಯ ಏಕೈಕ ಎಸ್‌ಟಿ ಕ್ಷೇತ್ರಕ್ಕೆ ಪ್ರಾತಿನಿಧ್ಯಕ್ಕಾಗಿ ಆಗ್ರಹ




ದಾವಣಗೆರೆ, ಆ.2- ಜಗಳೂರು ಕ್ಷೇತ್ರದ ಶಾಸಕ ಎಸ್.ವಿ.ರಾಮಚಂದ್ರ ಅವರಿಗೆ ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನ ನೀಡುವಂತೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ ಅವರು ಬಿಜೆಪಿ ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಅತ್ಯಂತ ಹಿಂದುಳಿದ ಜಗಳೂರು ವಿಧಾನಸಭಾ ಕ್ಷೇತ್ರಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿದೆ. ಕಳೆದ 3 ದಶಕಗಳಿಂದ ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನಸಂಖ್ಯೆ ಹೆಚ್ಚಾಗಿರುವ ಕ್ಷೇತ್ರವಾಗಿದೆ. ಯಾವುದೇ ನೀರಾವರಿ ಸೌಲಭ್ಯವಿಲ್ಲದ, ಕೃಷಿ ಮತ್ತು ಕುಡಿಯುವ ನೀರಿಗೆ ಮಳೆ ನೀರನ್ನೇ ಆಶ್ರಯಿಸಿರುವ ಶಾಶ್ವತ ಬರಪೀಡಿತ ಪ್ರದೇಶ ಎಂದೇ ಬಿಂಬಿತವಾಗಿದೆ. ಅತ್ಯಂತ ಹಿಂದುಳಿದ ಕ್ಷೇತ್ರದಲ್ಲಿ ಅಭಿವೃದ್ಧಿಯು ವೇಗ ಪಡೆದುಕೊಳ್ಳುವ ನಿಟ್ಟಿನಲ್ಲಿ ಹಾಗೂ ಸಾಮಾಜಿಕ ನ್ಯಾಯ ಕಲ್ಪಿಸುವ ದಿಸೆಯಲ್ಲಿ ಕ್ಷೇತ್ರಕ್ಕೆ ಈ ಬಾರಿ ಮಂತ್ರಿ ಸ್ಥಾನ ಕಲ್ಪಿಸಬೇಕು ಎಂದು ಅವರು ಹೇಳಿದ್ದಾರೆ.

ಜಿಲ್ಲೆಯ ಏಕೈಕ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಕ್ಷೇತ್ರವು ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಸಂದರ್ಭದಲ್ಲಿ 1990ರಲ್ಲಿ ಬಂಗಾರಪ್ಪ ಅವರ ಸಂಪುಟದಲ್ಲಿ ಜಿ.ಎಚ್. ಅಶ್ವತ್ಥ್ ರೆಡ್ಡಿ ಅವರು ಲೋಕೋಪಯೋಗಿ ಸಚಿವರಾಗಿದ್ದರು, ನಂತರದ ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ.

ಶಾಸಕ ಎಸ್.ವಿ. ರಾಮಚಂದ್ರ ಅವರು 3 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಬಿಜೆಪಿ ಪಕ್ಷದಲ್ಲಿ ಹಿರಿಯರಾಗಿದ್ದಾರೆ. ಜಗಳೂರು ತಾಲ್ಲೂಕಿನ ಕನಸಿನ ಯೋಜನೆಯಾದ ಭದ್ರಾ ಮೇಲ್ದಂಡೆ ಯೋಜನೆ ಹಾಗೂ 57 ಕೆರೆ ತುಂಬಿಸುವ ಯೋಜನೆ ಸೇರಿದಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ರಾಮಚಂದ್ರ ಅವರಿಗೆ ಈ ಬಾರಿ ಸಚಿವ ಸ್ಥಾನ ನೀಡಬೇಕು ಎಂದು ವೀರಣ್ಣ ಆಗ್ರಹಿಸಿದ್ದಾರೆ.

# ಮಹ್ಮದ್ ರಫಿ ಕೆರೂರಗೆ ಪಿಹೆಚ್‌ಡಿ



ದಾವಣಗೆರೆ, ಆ.1- ನಗರದ ಶಂಕರ ವಿಹಾರ ಬಡಾವಣೆಯ ಅಮೀನಾಬಿ ಮತ್ತು ಹುಸೇನ್‌ಸಾಬ್ ಕೆರೂರ ದಂಪತಿ ಪುತ್ರ ಮಹ್ಮದ್ ರಫಿ ಎಚ್. ಕೆರೂರ ಅವರು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಡಿಯಲ್ಲಿ 3 ಡಿ ಸರ್ಫೇಸ್ ರಫ್ನೇಸ್ ಇಫೆಕ್ಟ್ಸ್ ಆನ್ ಸ್ಟಡಿ ಸ್ಟೇಟ್ ಮತ್ತು ಟ್ರಾನ್ಸಿಯಂಟ್ ನಾನ್ ನ್ಯೂಟಿನೇಯನ್ ಟಿ ಎಚ್ ಡಿ ಅನಾಲಿಸಿಸ್ ಆಫ್ ಪೋರಸ್ ಬೇರಿಂಗ್ಸ್ ಎಂಬ ಪ್ರಬಂಧವನ್ನು ಡಾ. ಟಿ. ನಾಗರಾಜು ಅವರ ಮಾರ್ಗದರ್ಶನದಲ್ಲಿ ಮಂಡಿಸಿ ಪಿಹೆಚ್‌ಡಿ ಪದವಿ ಗಳಿಸಿದ್ದಾರೆ.

ಮಹ್ಮದ್ ರಫಿ ಎಚ್. ಕೆರೂರ, ಮಂಡ್ಯ ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಯಾಂತ್ರಿಕ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.

# ಜಿಲ್ಲಾ ವೈದ್ಯಾಧಿಕಾರಿ ಡಾ.ಚಂದ್ರಕಾಂತ್ ಸನ್ಮಾನ



ದಾವಣಗೆರೆ, ಆ.2- ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿ ಆಶ್ರಯದಲ್ಲಿ 75ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಪ್ರಯುಕ್ತ ಕೋವಿಡ್ ಮಹಾಮಾರಿ ಹಿನ್ನೆಲೆಯಲ್ಲಿ ನೀಡಿದ ಆರೋಗ್ಯ ಸೇವೆಯನ್ನು ಪರಿಗಣಿಸಿ, 2020 ನೇ ಸಾಲಿನ ರಾಷ್ಟ್ರಪ್ರಶಸ್ತಿಯನ್ನು ಜಿಲ್ಲಾ ವೈದ್ಯಾಧಿಕಾರಿ ಡಾ. ಚಂದ್ರಕಾಂತ ಎಸ್.ನಾಗಸಮುದ್ರ ಅವರಿಗೆ ನೀಡಿ ಗೌರವಿಸಲಾಗಿದೆ. ಶ್ರೀ ಮುರಳೀಧರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ದೂಡಾ ಅಧ್ಯಕ್ಷ ಶಿವಕುಮಾರ್ ರಾಜನಹಳ್ಳಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಎಂ.ಮಲ್ಲೇಶಪ್ಪ ಕುಕ್ಕುವಾಡ ಅಧ್ಯಕ್ಷತೆ ವಹಿಸಿದ್ದರು.

# ಕ್ಯಾಂಪಸ್ ಸಂದರ್ಶನ ಯುಬಿಡಿಟಿ ವಿದ್ಯಾರ್ಥಿಗಳು ಆಯ್ಕೆ

ದಾವಣಗೆರೆ, ಆ.2 2020-21ನೇ ಸಾಲಿನ ಕ್ಯಾಂಪಸ್ ಸಂದರ್ಶನದಲ್ಲಿ ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ವಿವಿಧ ವಿಭಾಗಗಳ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಹುರಾಷ್ಟ್ರೀಯ ವಿವಿಧ ಕಂಪನಿಗಳಿಗೆ ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಮಲ್ಲಿಕಾರ್ಜುನ ಎಸ್. ಹೊಳಿ ಮತ್ತು ಕಾಲೇಜಿನ ಉದ್ಯೋಗ, ತರಬೇತಿ ವಿಭಾಗದ ಅಧಿಕಾರಿ ಡಾ. ಅಶೋಕ ಕುಸಗೂರ ತಿಳಿಸಿದ್ದಾರೆ.

# ಲಸಿಕೆ, ಬೆಳೆ ಹಾನಿ ಪರಿಹಾರಕ್ಕೆ ಒತ್ತಾಯ




ಹರಪನಹಳ್ಳಿ, ಆ.2- ಕೋವಿಡ್ 1ನೇ ಹಾಗೂ 2ನೇ ಅಲೆಯಲ್ಲಿ ಮೃತಪಟ್ಟ ಕುಟುಂಬಗಳಿಗೆ ಪರಿಹಾರ, ಹದಿನೆಂಟು ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಗೂ 45 ವರ್ಷ ಮೇಲ್ಪಟ್ಟವರಿಗೆ 2ನೇ ಲಸಿಕೆ ಹಾಕಿಸಬೇಕು. 3ನೇ ಅಲೆಯನ್ನು ಎದುರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ. ವೀಣಾ ಮಹಾಂತೇಶ್ ತಹಶೀಲ್ದಾರ್ ಎಲ್.ಎಂ. ನಂದೀಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷರಾದ ಕವಿತಾ ವಾಗೀಶ್, ಚಿಗಟೇರಿ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ರೇಣುಕಮ್ಮ, ನ್ಯಾಯವಾದಿ ದುಗ್ಗಾವತಿ ಸಿದ್ಧಲಿಂಗನಗೌಡ, ಬಳ್ಳಾರಿ ಜಿಲ್ಲಾ ಸೋನಿಯಾ ಗಾಂಧಿ ಬ್ರಿಗೇಡ್ ಪ್ರಧಾನ ಕಾರ್ಯದರ್ಶಿ ಗಾಯತ್ರಿ ದೇವಿ, ಯುವ ಕಾಂಗ್ರೆಸ್ ಉಪಾಧ್ಯಕ್ಷ ದಾದಾಪೀರ್ ಮಕರಬ್ಬಿ, ಪ್ರಧಾನ ಕಾರ್ಯದರ್ಶಿ ಸಿ. ಮಂಜುನಾಥ್, ಯುವ ಕಾಂಗ್ರೆಸ್ ಕಾರ್ಯಕರ್ತರಾದ ಕಾರ್ತಿಕ್, ಮದನ್ ಸ್ವಾಮಿ, ಎಂ. ಅಂಜಿನಪ್ಪ, ಪ್ರಜ್ವಲ್ ಕುಮಾರ್, ಅರುಣ್ ಕುಮಾರ್, ಗುರು ಬಸವರಾಜ್ ಇನ್ನಿತರರು ಉಪಸ್ಥಿತರಿದ್ದರು.

# ಕ್ಯಾಮ್ಸ್ ಕಾರ್ಯದರ್ಶಿ ಶಶಿಕುಮಾರ್ ಮೇಲೆ ಹಲ್ಲೆ : ಖಂಡನೆ

ದಾವಣಗೆರೆ, ಆ.2- ಕರ್ನಾಟಕ ಖಾಸಗಿ ಶಾಲೆಗಳ ಸಂಘಟನೆಯ ಕಾರ್ಯದರ್ಶಿ ಶಶಿಕುಮಾರ್ ಅವರ ಮೇಲೆ ದುಷ್ಕರ್ಮಿಗಳ ಗುಂಪು ನಡೆಸಿದೆ ಎನ್ನಲಾದ ಹಲ್ಲೆಯನ್ನು ಜಿಲ್ಲಾ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ ಖಂಡಿಸಿದ್ದಾರೆ.


# ಸಿ. ರೇಖಾಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಆ.2- ನಗರದ ಜೆಜೆಎಂ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ. ಕೆ.ಬಿ. ಪ್ರಶಾಂತ್ ಅವರ ಪತ್ನಿ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದ ಮಾಜಿ ಸದಸ್ಯರಾದ ಜಿ.ಟಿ. ಚಂದ್ರಶೇಖರಪ್ಪ ಇವರ ಪುತ್ರಿ ಸಿ. ರೇಖಾ ಪ್ರಶಾಂತ್ ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿದೆ.

ಬೆಂಗಳೂರಿನ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಕೃಷ್ಣಮೂರ್ತಿ ಅವರ ಮಾರ್ಗದರ್ಶನದಲ್ಲಿ ರೇಖಾ ಅವರು ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ 'ಕ್ರಿಪ್ಟೋಗ್ರಫಿ ಥೀಸಿಸ್ ಡಿಸೈನ್ ಆಫ್ ಕೀ ಷೆಡ್ಯೂಲಿಂಗ್ ಅಲ್ಗರಿದಮ್ಸ್ ಫಾರ್ ಬ್ಲಾಕ್ ಸೈಪರ್ಸ್' ವಿಷಯ ಕುರಿತು ಮಂಡಿಸಿದ ಪ್ರೌಢ ಪ್ರಬಂಧಕ್ಕೆ ವಿಟಿಯು ಪಿಹೆಚ್‌ಡಿ ಪದವಿ ನೀಡಿದೆ. ರೇಖಾ ಅವರು ಈ ಹಿಂದೆ ತೋರಣಗಲ್ ಜೆಎಸ್‌ಡಬ್ಲ್ಯೂನಲ್ಲಿ ಸೀನಿಯರ್ ಇಂಜಿನಿಯರ್ ಆಗಿದ್ದರು.

# ನಗರದಲ್ಲಿ ಮುಂದುವರೆದ ಉಡುಪುಗಳ ಮಾರಾಟ ಮೇಳ



ದಾವಣಗೆರೆ, ಆ.2- ಪ್ರಪಂಚದಲ್ಲಿ ಕೊರೊನಾ ಮಹಾಮಾರಿಯು ಜನಜೀವನ ಅಸ್ತವ್ಯಸ್ತಗೊಳಿಸಿತ್ತು. ಎಲ್ಲ ವ್ಯವಹಾರಗಳಿಗೆ ಹೊಡೆತ ಕೊಟ್ಟಿತು. ಅದೇ ರೀತಿ ತಯಾರಾದ ಸಿದ್ಧ ಉಡುಪುಗಳು ಗೋಡೌನ್‌ಗಳಲ್ಲಿಯೇ ಉಳಿದು ಬಿಟ್ಟಿದ್ದವು. ಅವುಗಳನ್ನು ಮಾರಾಟ ಮಾಡಿ ಬರುವ ಹಣದಿಂದ ಸಾಲ ತೀರಿಸಬೇಕಾಗಿದ್ದರಿಂದ ನೇರವಾಗಿ ಮಿಲ್‌ಗಳ ದರದಲ್ಲಿ ಗ್ರಾಹಕರಿಗೆ ಒದಗಿಸಬೇಕೆಂಬ ಸದುದ್ದೇಶದಿಂದ ನಗರದ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ಭಾರೀ ರಿಯಾಯಿತಿಯ ಮಾರಾಟ ಮೇಳ ಮುಂದುವರೆದಿದೆ.

ಮೇಳಕ್ಕೆ ಭಾರೀ ಪ್ರತಿಕ್ರಿಯ ಕಂಡು ಬಂದಿತು. ತಮಿಳುನಾಡಿಗೆ ಹೋಗಬೇಕಾಗಿದ್ದ ಹೊಸ ಸ್ಟಾಕನ್ನು ಮತ್ತೆ ದಾವಣಗೆರೆಗೆ ತಂದು ಮೇಳವನ್ನು ಕೆಲವು ದಿನಗಳವರೆಗೆ ಮುಂದುವರೆಸಲಾಗಿದೆ.

ರೇಮಂಡ್, ಪಾರ್ಕ್ ಅವೆನ್ಯೂ, ಲೀ, ಆ್ಯರೋ, ಕಲರ್ ಪ್ಲಸ್, ರೂಟ್ಸ್ ಮುಂತಾದ ಕಂಪನಿಗಳ ಮಕ್ಕಳು, ಯುವಕರು, ಪುರುಷರು, ವಯೋವೃದ್ಧರು, ಹೀಗೆ ಎಲ್ಲ ವರ್ಗದವರಿಗೂ ಅಗತ್ಯವಿರುವ ಉಡುಪುಗಳ ದಾಸ್ತಾನು ಇಲ್ಲಿದೆ. ಬ್ರಾಂಡೆಡ್ ಬ್ರಾ, ಪ್ಯಾಂಟೀಸ್‌ಗಳು ದೊರೆಯಲಿವೆ.

ಜೆಂಟ್ಸ್ ಪ್ಯಾಂಟ್, ನೆಟೆಡ್ ಕಾಟನ್ ಸ್ಟ್ರೆಚ್, ಮಸ್ಕರೈಸ್ ಕಾಟನ್ ಸ್ಟ್ರೆಚ್, ಸ್ಯಾಟಿನ್, ಸಿಲ್ಕಿ, ಡಾಬಿ ಕಾಟನ್ ಸ್ಟ್ರೆಚ್, ಕಂಫರ್ಟ್ ಫಿಟ್, ನ್ಯಾರೋ, ಪೆನ್ಸಿಲ್, ರಿಲ್ಯಾಕ್ಸಡ್, ಕ್ಯಾಶ್ಯುಯಲ್ ಫಿಟ್ ಪ್ಯಾಂಟ್, ಕಿಡ್ಸ್ ಪ್ಯಾಂಟ್, ಟೀ-ಶರ್ಟ್, ಲೋವೆರ್ ಬರ್ಮುಡಾ, ಟಾಪ್, ಕೇಪ್ರೀ, ಲೇಡಿಸ್ ಪೈಜಾಮ್, ಬಾಬಾ ಸೂಟ್, ಫ್ಯಾನ್ಸಿ ಕಿಡ್ಸ್ ಡ್ರೆಸ್, ಸ್ಕಾರಿ, ಕುರ್ತೀಸ್ ಮುಂತಾದವು 150ರಿಂದ 350ರೂ.ಗಳಲ್ಲಿ ಸಿಗುತ್ತವೆ.

50 ಸಾವಿರ ಬಗೆಯ ಲೇಡಿಸ್, ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳು ಇಲ್ಲಿ ಲಭ್ಯವಿವೆ. 200-300 ರೂ.ಗೆ ಬ್ರಾಂಡೆಡ್ ಬ್ರಾ ಮತ್ತು ಪ್ಯಾಂಟೀಸ್, 150 ರಿಂದ 200 ರೂ.ಗೆ ಜಾರ್ಜೆಟ್ ಶಿಫಾನ್ ಪ್ರಿಂಟೆಡ್ ಕ್ರೇಪ್ ಸಿಲ್ಕ್ ಸ್ಯಾರೀಸ್, ಚಾಂದೇರಿ ಸಿಲ್ಕ್ ಸ್ಯಾರಿ, ಕಾಟನ್ ಸ್ಯಾರೀಸ್, ಗ್ರೀನ್ ವಿತ್ ಮರೂನ್ ಮುಂತಾದ ಸೀರೆಗಳು ಇಲ್ಲಿವೆ. ಬ್ರಾಂಡೆಡ್ ಡಿಸೈನರ್ ಕುರ್ತಿಗಳಾದ ಮೆಂಟ್ ಗ್ರೀನ್ ಕಾಟನ್, ಎಕ್ಸಲೆಂಟ್ ಪಾರ್ಟಿವೇರ್, ಬ್ಲಾಕ್ ಪ್ರಿಂಟೆಡ್ ಕಾಟನ್ ಲಾಂಗ್, ಫ್ಯಾನ್ಸಿ ಲೇಟೆಸ್ಟ್ ಡಿಸೈನರ್ ಕುರ್ತಿಗಳು 400-599 ರೂ.ಗೆ, ರಾಜಸ್ತಾನ ರಾಯಲ್ ಪ್ರಿಂಟ್ ಬೆಡ್‌ಶೀಟ್‌ಗಳು ಲಭ್ಯವಿವೆ.

# ವೀರೇಶ್ವರ ಪುಣ್ಯಾಶ್ರಮದಲ್ಲಿ ಕೋರೆ ಜನ್ಮ ದಿನಾಚರಣೆ



ದಾವಣಗೆರೆ, ಜು.2- ರಾಜ್ಯಸಭೆಯ ಮಾಜಿ ಸದಸ್ಯರೂ ಬೆಳಗಾವಿ ಕೆಎಲ್‌ಇ ವಿದ್ಯಾಸಂಸ್ಥೆ ಕಾರ್ಯಾಧ್ಯಕ್ಷರೂ ಡಾ. ಪ್ರಭಾಕರ್ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಂಸ್ಥಾಪಕರೂ ಆದ ಡಾ. ಪ್ರಭಾಕರ್ ಕೋರೆ ಅವರ ಜನ್ಮ ದಿನದ ಅಂಗವಾಗಿ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಅಂಧ ಮಕ್ಕಳಿಗೆ ರಗ್ಗುಗಳನ್ನು ವಿತರಿಸುವ ಮೂಲಕ ಜನ್ಮದಿನ ಆಚರಿಸಲಾಯಿತು.

ಡಾ. ಪ್ರಭಾಕರ್ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸ್ಥಳೀಯ ಶಾಖೆ ವತಿಯಿಂದ ರಗ್ಗುಗಳನ್ನು ವಿತರಿಸಲಾಯಿತು. ಶಾಖೆಯ ಅಧ್ಯಕ್ಷ ಐ.ಪಿ. ಮಲ್ಲೋಕಾರಾಧ್ಯ, ನಿರ್ದೇಶಕ ಸಂಗಮೇಶ್ ಹುರುಕಡ್ಲಿ, ಅಭಿವೃದ್ಧಿ ಅಧಿಕಾರಿ ಎಸ್.ಹೆಚ್. ಕಲ್ಲೇಶಿ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ದ್ವಿತೀಯ ಪಿಯುಸಿಯಲ್ಲಿ ಜೈನ್ ಪಿಯು ಕಾಲೇಜ್‌ಗೆ ಉತ್ತಮ ಫಲಿತಾಂಶ

ದಾವಣಗೆರೆ, ಆ.2 - ನಗರದ ಬಾಡಾ ಕ್ರಾಸ್ ಬಳಿಯ ಜೈನ್ ಪಿಯು ಕಾಲೇಜಿಗೆ 2020-21ರ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಸೈನ್ಸ್ ಮತ್ತು ಕಾಮರ್ಸ್ ವಿಭಾಗದಲ್ಲಿ ಉತ್ತಮ ಫಲಿತಾಂಶ ಲಭಿಸಿದೆ.

ವಿಜಯಲಕ್ಷ್ಮಿ ಕೆ.ವಿ (98.66%), ಮೋದಿನಿ ಭಾರದ್ವಾಜ್ (95%), ಕವನ ಎಸ್.ಎನ್ (93.83%) , ಸುಮಂತ್ ಎಸ್.ವಿ (91.66%), ಚಂದನ ಜೆ.ಎಸ್ (90.16%), ಶಾರೂನ್ ಜಿ (89.16%), ಸಂಜನಾ ಎ ಪಾಲನಕರ್ (89.16%), ಕಾವ್ಯ ಬಿ.ಡಿ (88.16%), ಜ್ಯೋತಿ ಬಾಯಿ ಎಸ್ (86.66%), ಹಂಸಾ ಎಚ್.ವಿ (85.83%), ಮೇಘನಾ ಎಂ.ಕೆ (85.83%), ಭೂಮಿಕಾ ಟಿ.ಟಿ. (85.16%), ರಂಜಿತಾ ಡಿ.ಎಚ್ (85.16%) ಇವರಿಗೆ ಸಂಸ್ಥೆಯ ಅಧ್ಯಕ್ಷ ಅಚಲ್ ಚಂದ್ ಜೈನ್, ಪ್ರಾಂಶುಪಾಲ ಜಿ.ಸದಾನಂದ ಹಾಗೂ ಬೋಧಕ ವರ್ಗದವರು ಅಭಿನಂದಿಸಿದ್ದಾರೆ.

# ಜಿಲ್ಲಾ ನ್ಯಾಯಾಧೀಶರಾಗಿ ರಾಜೇಶ್ವರಿ ಹೆಗಡೆ

**(1ನೇ ಪುಟದಿಂದ)** ಸದಸ್ಯರನ್ನಾಗಿ ನೇಮಿಸಲಾಗಿದೆ. ಒಟ್ಟು ನಾಲ್ವರು ಜಿಲ್ಲಾ ನ್ಯಾಯಾಧೀಶರುಗಳನ್ನು ಇಂದು ವರ್ಗಾವರ್ಗಿ ಮಾಡಲಾಗಿದ್ದು, ಹಾವೇರಿ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾಗಿ ಶ್ರೀಮತಿ ಯಾದವ್ ವನಮಾಲಾ ಆನಂದ್‌ರಾವ್ ಅವರು ನೇಮಕಗೊಂಡಿದ್ದಾರೆ.

ಶ್ರೀಮತಿ ಯಾದವ್ ವನಮಾಲಾ ಆನಂದ್‌ರಾವ್ ಅವರು ಇದುವರೆಗೂ ಉಡುಪಿ ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಹಾವೇರಿ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಶ್ರೀಮತಿ ಎಸ್.ಹೆಚ್.ರೇಣುಕಾದೇವಿ ಅವರು ಬೆಂಗಳೂರಿನ ಆಡಳಿತ ನ್ಯಾಯಾಧೀಕರಣದ ಸದಸ್ಯರಾಗಿ ವರ್ಗವಾಗಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಸುಬ್ರಮಣ್ಯ ಡಿ. ಶೇಟ್ ಬಿನ್ ದೇವಿದಾಸ್ ಶೇಟ್**, ವಾಸ : # 2974/2, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:

ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಕಾನೂನು ಬದ್ದ ಹಕ್ಕುದಾರಿ ಮಾಲೀಕರಾದ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕಕ್ಕರಗೊಳ್ಳ ಗ್ರಾಮದ **ಶ್ರೀ ಕೆ. ದಾನಪ್ಪ ಬಿನ್ ಕಲ್ಲಪ್ಪ** ಮತ್ತು ಇವರ ಹೆಂಡತಿಯಾದ **ಶ್ರೀಮತಿ ಜಯಮ್ಮ** ಮತ್ತು ಸದರಿಯವರ ಮಕ್ಕಳಾದ **ಶ್ರೀ ಮಲ್ಲಿಕಾರ್ಜುನ ಡಿ.ಕೆ., ಶ್ರೀಮತಿ ವಿಜಯ ಲಕ್ಷ್ಮಿ** ಮತ್ತು **ಶ್ರೀಮತಿ ಶಿಲ್ಪ ಡಿ.ಕೆ.** ಇವರುಗಳಿಂದ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಷೆಡ್ಯೂಲ್ ಆಸ್ತಿಯ ಬಗ್ಗೆ ಸಾರ್ವಜನಿಕರು ಯಾರೇ ಆಗಲಿ ತಂಟೆ ತಕಾರರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ, ಈ ಪ್ರಕಟಣೆ ಪ್ರಕಟಗೊಂಡ 1 ವಾರದೊಳಗಾಗಿ ಈ ಕೆಳಕಂಡವರನ್ನು ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು. ಒಂದು ವಾರದೊಳಗಾಗಿ ಯಾವುದೇ ರೀತಿಯ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಆಸ್ತಿಯನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಕಕ್ಕರಗೊಳ್ಳ ಗ್ರಾಮದ ಸರ್ವೆ ನಂ.122/13 ರಲ್ಲಿ ವಿಸ್ತೀರ್ಣ 02 ಎಕರೆ ಪೂರಾ ಜಮೀನಿಗೆ ಚಕ್ಕುಬಂದಿ:

**ಪೂರ್ವಕ್ಕೆ : ದಾರಿ** **ಪಶ್ಚಿಮಕ್ಕೆ: ಸಂಕಪ್ಪನವರ ಜಮೀನು**
**ಉತ್ತರಕ್ಕೆ : ಸಂಕಪ್ಪನವರ ಜಮೀನು** **ದಕ್ಷಿಣಕ್ಕೆ: ರಸ್ತೆ**

**ಎಂ.ಎಸ್ ರಾಜಕುಮಾರ್**, ವಕೀಲರು
ವಿಳಾಸ: # 269/14, ದಾವಣಗೆರೆ ಒನ್/ಸೂಪರ್ ಮಾರ್ಕೆಟ್
ಹಿಂಭಾಗ, ಎಂ.ಸಿ.ಸಿ 'ಎ' ಬ್ಲಾಕ್, ದಾವಣಗೆರೆ-2
**ಮೊ ನಂ.94489 06865**

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು, ಶಿರಮಗೊಂಡನಹಳ್ಳಿ ಗ್ರಾಮದ ಸೈಟ್ ನಂ. 412, ವಿಸ್ತೀರ್ಣ 120+90/2*60 ಅಡಿವುಳ್ಳ ಖಾಲಿ ನಿವೇಶನ (ಷೆಡ್ಯೂಲ್)ವನ್ನು ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿಯಿಂದ ದಿನಾಂಕ 20.07.1983ರಂದು ಶ್ರೀ ಇಂದ್ರರಾಜಪ್ಪ ಬಿನ್ ಎ.ಆರ್. ಬಸಪ್ಪ ಇವರ ಹೆಸರಿಗೆ ನಿವೇಶನ ಮಂಜೂರಿ ಸರ್ಟಿಫಿಕೇಟ್ ನಂ. 448/83-84ರ ಮುಖಾಂತರ ಮಂಜೂರಾಗಿರುತ್ತದೆ. ಅನಂತರ ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಡೋರ್ ನಂ. 681 ಎಂದು ಇಂದ್ರರಾಜಪ್ಪ ಇವರ ಹೆಸರಿಗೆ ಖಾತೆಯಾಗಿದ್ದು, ಅನಂತರ ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿಯು ದಾವಣಗೆರೆ ನಗರಸಭೆಗೆ ವಿಲೀನಗೊಂಡಿದ್ದು, ಅನಂತರ ದಾವಣಗೆರೆ ನಗರಸಭೆಯವರು ಸದರಿ ಆಸ್ತಿಗೆ ಡೋರ್ ನಂ. 681/412 ನ್ನು ನೀಡಿ ಸದರಿ ಇಂದ್ರರಾಜಪ್ಪ ಇವರ ಹೆಸರಿನಲ್ಲಿ ಖಾತೆಯನ್ನು ಮಾಡಿರುತ್ತಾರೆ. ಸದರಿ ಇಂದ್ರರಾಜಪ್ಪ ಇವರ ಮರಣಾನಂತರ ಸೈಟ್ ನಂ. 412 ಇದರ ಮಹಾನಗರ ಪಾಲಿಕೆ ಡೋರ್ ನಂ. 681/412ನ್ನು (ಷೆಡ್ಯೂಲ್ ಆಸ್ತಿ) ಸದರಿ ಇಂದ್ರರಾಜಪ್ಪ ಇವರ ಧರ್ಮಪತ್ನಿ ಶ್ರೀಮತಿ ಸುವರ್ಣಮ್ಮ ಮತ್ತು ಇವರ ಮಗನಾದ ಹೇಮಂತಕುಮಾರ್ ಐ.ಆರ್. ಇವರ ಹೆಸರಿಗೆ ದಿನಾಂಕ 01-06-2021 ರಂದು ದಾವಣಗೆರೆ ಮಹಾನಗರ ಪಾಲಿಕೆಯ ಆದೇಶದ ಸಂಖ್ಯೆ 03/ಸಿಆರ್/192/20-21ರ ಮುಖಾಂತರ ಖಾತಾ ವರ್ಗಾವಣೆಯಾಗಿದ್ದು ಸದರಿ ಆಸ್ತಿಯ ಖಾತೆಯು ಈಗ ಅವರ ಹೆಸರಿನಲ್ಲಿರುತ್ತದೆ.

ನಮ್ಮ ಕಕ್ಷಿದಾರರು ಷೆಡ್ಯೂಲ್ ಆಸ್ತಿಯನ್ನು ಮೇಲ್ಕಂಡ ಶ್ರೀಮತಿ ಸುವರ್ಣಮ್ಮ ಕೋಂ. ಲೇಟ್ ಇಂದ್ರರಾಜಪ್ಪ ಮತ್ತು ಶ್ರೀ ಹೇಮಂತ್‌ಕುಮಾರ್ ಐ.ಆರ್. ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಆಸ್ತಿಯನ್ನು ಮೇಲ್ಕಂಡ ವ್ಯಕ್ತಿಗಳಿಂದ ಖರೀದಿಸಲು, ಯಾರದ್ದಾದರೂ ಯಾವುದೇ ರೀತಿಯಿಂದ ತಂಟೆ ತಕರಾರು, ಅಧಿಕಾರ, ಭಾಗಾಂಶ, ಹಕ್ಕುಬಾಧ್ಯತೆಗಳು ಇದ್ದಲ್ಲಿ ಪತ್ರಿಕಾ ಪ್ರಕಟಣೆಯಾದ 7 ದಿನದೊಳಗಾಗಿ ನಮ್ಮನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ನಮ್ಮ ಕಕ್ಷಿದಾರರು ಖರೀದಿಸಿದ ನಂತರ ಯಾವುದೇ ರೀತಿಯಿಂದ ತಂಟೆ ತಕರಾರು ಬಂದಲ್ಲಿ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲ.

**ಷೆಡ್ಯೂಲ್ :** ದಾವಣಗೆರೆ ತಾಲ್ಲೂಕು, ಶಿರಮಗೊಂಡನಹಳ್ಳಿ ಗ್ರಾಮದ ವ್ಯಾಪ್ತಿಗೊಳಪಟ್ಟ ಶಿರಮಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಸೈಟ್ ನಂ. 412, ಇದರ ಗ್ರಾಮ ಪಂಚಾಯಿತಿ ಡೋರ್ ನಂ. 681, ದಾವಣಗೆರೆ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ. 681/412, ವಿಸ್ತೀರ್ಣ 120+90/2*60 ಅಡಿಗಳುಳ್ಳ, ಆಸ್ತಿಗೆ ಚಕ್ಕುಬಂದಿ ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸೈಟ್ ನಂ. 395 ಮತ್ತು 394, ಉತ್ತರಕ್ಕೆ : ಸೈಟ್ ನಂ. 413, 414 ಮತ್ತು 415, ದಕ್ಷಿಣಕ್ಕೆ : ಸೈಟ್ ನಂ. 411.

**ದಿನಾಂಕ : 02-08-2021**
**ದಾವಣಗೆರೆ**

**ಎ.ಎಂ. ಹಿರೇ ಕೊಟ್ರೇಶ್**
**ವಕೀಲರು, ಅಶೋಕ ರಸ್ತೆ, ದಾವಣಗೆರೆ.**
**ಮೊ. 94483 38532**

# ಅಪರೂಪದ ವಲಸೆಗಾರ ನೀಲಿ-ಬಾಲದ ಕಳ್ಳಿಪೀರ



ವಲಸೆ ಎಂಬುದು ಬದುಕಿನ ಹೋರಾಟದ ಅವಿಭಾಜ್ಯ ಅಂಗ. ಸೂಕ್ತ ಪರಿಸರಕ್ಕಾಗಿ ಹುಡುಕಾಟ ಮತ್ತು ತಾತ್ಕಾಲಿಕ/ಖಾಯಂ ಪರಿಸರಕ್ಕೆ ಹೊಂದಿಕೊಳ್ಳುವ ಜೀವಿಗಳು ತಮಗೆ ಬೇಕಾದ ದೈಹಿಕ ಮತ್ತು ಮಾನಸಿಕ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಈ ವಲಸೆ ಪದ್ಧತಿ ಹಕ್ಕಿಗಳಲ್ಲಿ ಅತ್ಯುನ್ನತ ಮಟ್ಟದ್ದು. ಉತ್ತರದ ಚಳಿ ಪ್ರದೇಶಗಳಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಚಳಿಗಾಲದಲ್ಲಿ ವಲಸೆ ಬರುವ ಹಕ್ಕಿಗಳಲ್ಲೊಂದು ನೀಲಿ-ಬಾಲದ ಕಳ್ಳಿಪೀರ (Blue-tailed bee eater). ಪ್ರಾಣಿ ಶಾಸ್ತ್ರೀಯ ಹೆಸರು ಮಿರೋಪ್ಸ್ ಫಿಲಿಪೈನಸ್ (Mirops philippinus).

ಸಾಮಾನ್ಯ ಮೈನಾ ಗಾತ್ರದ ಹಕ್ಕಿ (26 ಸೆಂ.ಮೀ). ಕಣ್ಣಿಗೆ ಕಪ್ಪು ಪಟ್ಟಿ. ಕಡು-ಕಂದು ಬಣ್ಣದ ಕುತ್ತಿಗೆ ಮತ್ತು ಎದೆ. ಚೂಪಾದ ತುಸು ಬಾಗಿದ ಕಪ್ಪು ಕೊಕ್ಕು. ಹಸಿರು ತಲೆ ಮತ್ತು ಬೆನ್ನು. ದೇಹದ ಮೇಲ್ಭಾಗ ಹಸಿರು. ಆದರೆ ಕೆಳಭಾಗ ಕಂದು ಮಿಶ್ರಿತ ಹಸಿರು ಮತ್ತು ನೀಲಿ ಬಣ್ಣದ್ದಾಗಿದೆ. ಬೆನ್ನಿನಿಂದ ಕೆಳಗೆ ಬಾಲವು ಸೇರಿದಂತೆ ಆಕರ್ಷಕ ನೀಲಿ ಬಣ್ಣ. ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ. ಮರಿಗಳಲ್ಲಿ ಗಾಢ ಬಣ್ಣವಿರದೇ ಬಣ್ಣ ತೊಳೆದಂತೆ ಕಾಣುತ್ತವೆ. ಕುರುಚಲು ಕಾಡು ಮತ್ತು ನೀರಿನ ಹತ್ತಿರವಿರುವ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಟೀ..... ಟ್ವಿ.....ಟೀ....ಟ್ವಿ ಎಂಬ ಕೂಗು. ಕೀಟಗಳೇ ಪ್ರಮುಖ ಆಹಾರ. ಹಾರುತ್ತಲೇ ಗಾಳಿಯಲ್ಲೇ ಬೇಟೆಯಾಡುವುದರಲ್ಲಿ ನಿಷ್ಣಾತ. ಹಾರುತ್ತಿರುವ ಜೇನು ನೊಣ, ಡ್ರಾಗನ್ ಫ್ಲೈ ಗಳನ್ನು ಚಾಕಚಕ್ಯತೆಯಿಂದ ಹಿಡಿದು ಹತ್ತಿರದ ಗಿಡ ಅಥವಾ ತಂತಿಯ ಮೇಲೆ ಕುಳಿತು ಮಿಕವನ್ನು ಬಡಿದು ಬಡಿದು ಮೇಲೆ ಹಾರಿಸಿ ತಿನ್ನುತ್ತದೆ. ಸಂತಾನಾಭಿವೃದ್ಧಿ ಸಮಯ ಮಾರ್ಚ್‌ನಿಂದ-ಜೂನ್ ತನಕ. ಕೆರೆ ಮತ್ತು ನದಿ ಪಾತ್ರದ ಅಂಚಿನಲ್ಲಿ ಮಣ್ಣನ್ನು ಕೊರೆದು ಮಾಡಿದ ಸುರಂಗದಂತಿರುವ ಗೂಡಿನಲ್ಲಿ 5 ರಿಂದ 7 ಅಚ್ಚ ಬಿಳಿಯ ಬಣ್ಣದ ಮೊಟ್ಟೆಗಳನ್ನಿಡುತ್ತವೆ. ತಂದೆ-ತಾಯಿಯರಿಬ್ಬರೂ ಗೂಡು ಮಾಡುವುದರಿಂದ ಹಿಡಿದು ಮರಿಗಳ ಪೋಷಣೆಯಲ್ಲಿ ಸಮಾನ ಭಾಗಿದಾರರು.

ದಾವಣಗೆರೆಗೆ ಪ್ರತಿ ಚಳಿಗಾಲದಲ್ಲಿ ಉತ್ತರ ಭಾರತದಿಂದ ಬರುವ ಅತಿಥಿಗಳಿವರು. ಚಳಿಗಾಲ ಪ್ರಾರಂಭವಾದೊಡನೆ ಅಲ್ಲಿ ಇಲ್ಲಿ ಒಂದೊಂದಾಗಿ ಅಥವಾ ಸಣ್ಣ ಗುಂಪಿಗಳಲ್ಲಿ ಕಾಣಸಿಗುವ ಈ ಹಕ್ಕಿಗಳು ನಿಸರ್ಗದ ಅದ್ಭುತ ವರ್ಣ ಸಂಯೋಜನೆಯ ಪ್ರತೀಕ. ಒಬ್ಬ ಚಿತ್ರಕಾರ ಅತೀ ಸೂಕ್ಷ್ಮವಾಗಿ ಬಣ್ಣಗಳ ಮಿಶ್ರಣ ಮಾಡಿ ಬರೆದಿದ್ದಾನೇನೋ ಎಂಬುವಷ್ಟು ಪ್ರಕೃತಿಯ ಕಲಾವಂತಿಕೆ ಇವುಗಳಲ್ಲಿ ಅನಿರ್ವಚನೀಯ. ಹಿಮಾಲಯ, ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾ ಮತ್ತು ಮಯನ್ಮಾರ್ ದೇಶಗಳಲ್ಲಿ ವಾಸ. ಚಳಿಗಾಲದಲ್ಲಿ ಅಂಡಮಾನ್-ನಿಕೋಬಾರ್ ಸೇರಿದಂತೆ ದಕ್ಷಿಣ ರಾಜ್ಯಗಳ ಕಡೆ ವಲಸೆ. ಆಕರ್ಷಕ ನೀಲಿ ಬಣ್ಣದ ಬಾಲ ಹೊಂದಿರುವ ಈ ವಿಶಿಷ್ಟ ಹಕ್ಕಿಗಳು ದಾವಣಗೆರೆ ನಗರದ ಸುತ್ತ-ಮುತ್ತ ಮತ್ತು ಕೃಷಿ ಭೂಮಿಯ ಆಸು-ಪಾಸು ಚಳಿಗಾಲದಲ್ಲಿ ಮಾತ್ರ ನೋಡಲು ಸಾಧ್ಯ.

- ಡಾ. ಎಸ್. ಶಿಶುಪಾಲ
ಪ್ರಾಧ್ಯಾಪಕರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ,
ದಾವಣಗೆರೆ ವಿಶ್ವವಿದ್ಯಾಲಯ

# ಬೊಮ್ಮಾಯಿ ಡಮ್ಮಿ ಸಿಎಂ, ಯಡಿಯೂರಪ್ಪ ಪೆನ್

## 2023ರ ಹೊತ್ತಿಗೆ ಬಿಜೆಪಿ-ಸಂಘ ಪರಿವಾರಗಳು ನಿಷ್ಕ್ರಿಯ: ಕಾಂಗ್ರೆಸ್ ಓಬಿಸಿ ರಾಜ್ಯಾಧ್ಯಕ್ಷ ಲಕ್ಷ್ಮಿನಾರಾಯಣ



ದಾವಣಗೆರೆ, ಆ. 2- 2023 ರ ಹೊತ್ತಿಗೆ ಬಿಜೆಪಿಮತ್ತುಸಂಘಪರಿವಾರಗಳುನಿಷ್ಕ್ರಿಯಗೊಳ್ಳಲಿದ್ದು, ಕಾಂಗ್ರೆಸ್ ಪಕ್ಷ ಸಂಘಟನಾತ್ಮಕ ಶಕ್ತಿಯ ಮೂಲಕ ಮುಂಬರುವ ಚುನಾವಣೆ ಎದುರಿಸಲು ಸಜ್ಜಾಗಬೇಕಾಗಿದೆ ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯಾಧ್ಯಕ್ಷ ಎಂ.ಡಿ. ಲಕ್ಷ್ಮಿನಾರಾಯಣ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವತಿಯಿಂದ ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಜಿಲ್ಲಾ ಕಾಂಗ್ರೆಸ್ ಒಬಿಸಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಬಿಜೆಪಿ ಸರ್ಕಾರದಲ್ಲಿ ಹಿಮಾಲಯದಷ್ಟು ಎತ್ತರ ಭ್ರಷ್ಟಾಚಾರ ಮನೆ ಮಾಡಿದ್ದು, ಹಾಲಿ ಸರ್ಕಾರ ಕೂಡ ನಿಷ್ಕ್ರಿಯಗೊಂಡಿದ್ದು, ಬಸವರಾಜ ಬೊಮ್ಮಾಯಿ ಡಮ್ಮಿ ಮುಖ್ಯಮಂತ್ರಿ, ಪೆನ್ ಯಡಿಯೂರಪ್ಪ ಅವರ ಕೈಲಿದೆ ಎಂದು ಅವರು ಲೇವಡಿ ಮಾಡಿದರು.

ರಾಜ್ಯದಲ್ಲಿ ಶೇ.52 ರಷ್ಟು ಹಿಂದುಳಿದ ವರ್ಗದವರಿದ್ದು, ಇದರಲ್ಲಿ 197 ಹಿಂದುಳಿದ ಸಮುದಾಯಗಳಿವೆ. ರಾಜ್ಯ ಬಿಜೆಪಿ ಸರ್ಕಾರದಲ್ಲಿ ಹಿಂದುಳಿದ ಸಮುದಾಯಗಳಿಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ನಿರ್ಲಕ್ಷ್ಯ ಮಾಡಿದೆ ಎಂದು ದೂರಿದರು.

ರಾಜ್ಯ ಸರ್ಕಾರದ ಒಟ್ಟು ಬಜೆಟ್ 2.46 ಲಕ್ಷ ಕೋಟಿ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹಿಂದುಳಿದ ವರ್ಗಗಳಿಗೆ 6 ಸಾವಿರ ಕೋಟಿ ರೂ. ಗಳ ಅನುದಾನವನ್ನು ಮೀಸಲಿರಿಸಲಾಗಿತ್ತು. ಆದರೆ ಬಿಜೆಪಿ ಸರ್ಕಾರ 400 ಕೋಟಿ ಗೆ ಅನುದಾನ ಇಳಿಕೆ ಮಾಡಿತು. ಹಿಂದುಳಿದ ವರ್ಗಗಳ 100 ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನೀಡಲಾಗುತ್ತಿದ್ದ ಪ್ರೋತ್ಸಾಹ ಧನವನ್ನು ಕೈಬಿಡಲಾಗಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಬಿಜೆಪಿ ಒಂದು ಸುಳ್ಳನ್ನೇ ನೂರು ಬಾರಿ ಹೇಳಿ ಜನರನ್ನು ವಂಚಿಸುತ್ತಾ ಬಂದಿದೆ. ಪ್ರಧಾನಿ ಮೋದಿ ಅವರು 100 ದಿನಗಳಲ್ಲಿ ಇಡೀ ದೇಶದ ಚಿತ್ರಣವನ್ನೇ ಬದಲಾಯಿಸುತ್ತೇನೆ, ಮೂರು ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆ ಎಂದು ಹೇಳುವ ಮೂಲಕ ಜನರಿಗೆ ಮೋಸ ಮಾಡಿದ್ದಾರೆಂದು ಆರೋಪಿಸಿದರು.


ಹರಿಹರದ ಶಾಸಕ ಎಸ್. ರಾಮಪ್ಪ ಮಾತನಾಡಿ, ಬಿಜೆಪಿ ಸರ್ಕಾರದಿಂದ ಯಾರಿಗೂ ಕೂಡ ಒಳಿತಾಗಿಲ್ಲ. ಇದುವರೆಗೂ ಯಡಿಯೂರಪ್ಪ ಮತ್ತವರ ಪುತ್ರ ವಿಜಯೇಂದ್ರ ಅವರದೇ ಆಳ್ವಿಕೆಯಾಗಿತ್ತು. ಕಮೀಷನ್ ಕೊಟ್ಟು ಅನುದಾನ ಮಂಜೂರು ಮಾಡಿಸಿಕೊಂಡು ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಸವರಾಜ ಬೊಮ್ಮಾಯಿ ಅವರು ಕೇವಲ ರಬ್ಬರ್ ಸ್ಟ್ಯಾಂಪ್ ಇದ್ದಂತೆ ಎಂದು ಕುಟುಕಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ಸುಳ್ಳು ಆಶ್ವಾಸನೆ ಕೊಡುತ್ತಲೇ ಬಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಐಸಿ, ರೈಲ್ವೆ, ವಿಮಾನಯಾನ ಮುಂತಾದ ಸೇವಾ ಸಂಸ್ಥೆಗಳನ್ನು ಖಾಸಗೀಕರಣ ಮಾಡುವ ಮೂಲಕ ದೇಶವನ್ನೇ ಮಾರಲು ಹೊರಟಿದ್ದಾರೆ. ಅತ್ಯಂತ ಕೆಟ್ಟ ಸರ್ಕಾರ ಆಡಳಿತ ನಡೆಸುತ್ತಿದ್ದು, ಇವರ ದುರಾಡಳಿತಕ್ಕೆ ಜನರು ಬೇಸತ್ತಿದ್ದಾರೆ.

ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ನಲ್ಕುಂದ ಹಾಲೇಶ್ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಘಟಕದ ಜಿಲ್ಲಾಧ್ಯಕ್ಷ ಅನಿತಾಬಾಯಿ ಮಾಲತೇಶರಾವ್ ಜಾಧವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮುಖಂಡರಾದ ಎ. ನಾಗರಾಜ್, ಎಸ್. ಮಲ್ಲಿಕಾರ್ಜುನ್, ಸತೀಶ್, ಉಮಾಪತಿ, ನಾಗೇಂದ್ರಪ್ಪ, ಮಂಜುನಾಥ್, ಅಭಿದಾಲಿ, ಜಮ್ನಳ್ಳಿ ನಾಗರಾಜ್, ಮುನಿರತ್ನಮ್ಮ, ಶ್ರೀನಿವಾಸ್ ನಂದಿಗಾವಿ, ಉಮೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ರಾಜ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಜಮ್ನಳ್ಳಿ ನಾಗರಾಜ್ ಹಾಗೂ ಹರಿಹರದಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಿರುವ ನಂದಿಗಾವಿ ಶ್ರೀನಿವಾಸ್ ಅವರನ್ನೂ ಸಹ ಪಕ್ಷದ ಧ್ವಜ ನೀಡಿ ಸ್ವಾಗತಿಸಲಾಯಿತು.

# ಹೊರ ರಾಜ್ಯಗಳಿಂದ ಬರುವವರಿಗೆ ಟೆಸ್ಟ್



ಬೆಂಗಳೂರು, ಆ. 2 - ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಆಗಮಿಸುವ ವರು ಕೋವಿಡ್ ಪರೀಕ್ಷೆಗೆ ಒಳಗಾಗಲೇ ಬೇಕು. ಪರೀಕ್ಷೆ ಮಾಡಿಸಿಕೊಂಡವರು ವರದಿ ಬರುವವರೆಗೂ ಹೋಂ ಕ್ವಾರೆಂಟೈ ನ್‌ನಲ್ಲಿ ಇರುವುದು ಕಡ್ಡಾಯ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ತಿಂಗಳಾಂತ್ಯಕ್ಕೆ ಕೊರೊನಾ ಸೋಂಕಿನ ಮೂರನೇ ಅಲೆ ಕಾಣಿಸಿಕೊಳ್ಳ ಬಹುದೆಂಬ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುಂಜಾಗ್ರತಾ ಕ್ರಮ ಕೈಗೊಂಡಿದೆ.

ತಜ್ಞರು ಮೂರನೇ ಅಲೆಗೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಇಲಾಖೆಗೆ ವರದಿ ನೀಡಿದ ಬೆನ್ನಲ್ಲೇ ರಾಜ್ಯ ಸರ್ಕಾರ ಎರಡನೇ ಅಲೆ ಸಂದ ರ್ಭದಲ್ಲಿ ಮಾಡಿದ ತಪ್ಪು ಮರುಕಳಿಸ ದಂತೆ ನೋಡಿಕೊಳ್ಳಲು ಆರೋಗ್ಯ ಮತ್ತು ಪೌರಾಡಳಿತ ಇಲಾಖೆ ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಲು ಮುಂದಾಗಿದೆ.

ರಾಜ್ಯಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಈಗಾಗಲೇ ಕೊರೊನಾ ಸೋಂಕು ವ್ಯಾಪಕವಾಗಿ ಹರಡಿದೆ. ಇದನ್ನು ಮನಗಂಡು ರಾಜ್ಯ ಸರ್ಕಾರ ಈಗಾಗಲೇ ಆ ರಾಜ್ಯಗಳಿಂದ ಬರುವವರು 72 ಗಂಟೆಗಳ ಮುಂಚೆ ಆರ್‌ಟಿಪಿಸಿಆರ್ ಪರೀಕ್ಷೆ ನೆಗೆಟಿವ್ ವರದಿ ಹೊಂದಿರುವುದು ಕಡ್ಡಾಯ ಎಂದು ಆದೇಶಿಸಿದೆ.

ವಿದೇಶ ಮತ್ತು ಹೊರ ರಾಜ್ಯ ಗಳಿಂದ ಆಗಮಿಸುವವರನ್ನು ವಿಮಾನ ನಿಲ್ದಾಣ, ರೈಲ್ವೆ ಹಾಗೂ ಬಸ್ ನಿಲ್ದಾಣಗಳಲ್ಲಿಯೇ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಡಾ.ಎಸ್.ಎಂ. ಎಲಿ ಅವರಿಗೆ ಸನ್ಮಾನ



ದಾವಣಗೆರೆ, ಆ.2- ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ನಗರದ ಹಿರಿಯ ವೈದ್ಯ ಡಾ. ಎಸ್.ಎಂ. ಎಲಿ ಅವರಿಗೆ ಬೆಂಗಳೂರಿನ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ 'ಕರ್ನಾಟಕ ಭೂಷಣ ಪ್ರಶಸ್ತಿ' ನೀಡಲಾಗಿದೆ. ಡಾ. ಎಲಿ ಅವರ ಸ್ವಗೃಹಕ್ಕೆ ಭೇಟಿ ನೀಡಿದ ಸಂಸ್ಥೆಯ ಅಧ್ಯಕ್ಷರೂ, ಚಲನಚಿತ್ರ ನಿರ್ದೇಶಕರೂ ಆದ ಡಾ. ಗುಣವಂತ ಮಂಜು ಅವರು ಡಾ. ಎಲಿ ಅವರನ್ನು ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಿದರು.

ಚಲನಚಿತ್ರ ನಿರ್ಮಾಪಕ ಯಜಮಾನ್ ರಾಜೇಂದ್ರ ಅವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ಸತ್ಯನಾರಾಯಣ ಕ್ಯಾಂಪ್‌ನ ಡಾ. ರಾಮಾಂಜನೇಯ ಸ್ವಾಮಿ, ಪತ್ರಿಕಾ ವಿತರಕ ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರದ ಕುರಿ - ಮೇಕೆ ಸಂತೆ ರದ್ದು

ಹರಿಹರ, ಆ.2- ಕೊರೊನಾ 3ನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಎಪಿಎಂಸಿಯಲ್ಲಿ ಪ್ರತಿ ಮಂಗಳವಾರ ನಡೆಯುವ ಕುರಿ ಮತ್ತು ಮೇಕೆ ಸಂತೆಯನ್ನು ನಾಳೆ ದಿನಾಂಕ 3 ರಿಂದ ಸರ್ಕಾರದ ಮುಂದಿನ ಆದೇಶದವರೆಗೆ ರದ್ದುಗೊಳಿಸಲಾಗಿದೆ ಎಂದು ಎಪಿಎಂಸಿ ಕಾರ್ಯದರ್ಶಿ ತಿಳಿಸಿದ್ದಾರೆ.

# ಪ್ರತಿಭಟನೆ ನಂತರ ಎಲ್ಲರೂ ಪಾಸ್

**12ನೇ ತರಗತಿ**

ಕೊಲ್ಕೊತಾ, ಆ. 2 – 12ನೇ ತರಗತಿಯಲ್ಲಿ ಫೇಲಾದವರು ಪ್ರತಿಭಟನೆ ನಡೆಸಿದ ನಂತರ ಎಲ್ಲರನ್ನೂ ಪಾಸ್ ಮಾಡಿರುವ ಘಟನೆ ಪಶ್ಚಿಮ ಬಂಗಾಳದಲ್ಲಿ ನಡೆದಿದೆ. 12ನೇ ತರಗತಿಯಲ್ಲಿ ಫೇಲಾದವರನ್ನೆಲ್ಲಾ ಪಾಸ್ ಮಾಡಿರುವುದಾಗಿ ಪಶ್ಚಿಮ ಬಂಗಾಳ ಉನ್ನತ ಮಾಧ್ಯಮಿಕ ಶಿಕ್ಷಣ ಮಂಡಳಿ ತಿಳಿಸಿದೆ.

ಜುಲೈ 22ರಂದು ಪ್ರಕಟಿಸಲಾದ ಫಲಿತಾಂಶದಲ್ಲಿ 18 ಸಾವಿರಕ್ಕೂ ಹೆಚ್ಚು ಜನರು ಫೇಲ್ ಆಗಿದ್ದಾರೆ ಎಂದು ಹೇಳಲಾಗಿತ್ತು. ಒಟ್ಟು 8.19 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಫೇಲ್ ಆದ ವಿದ್ಯಾರ್ಥಿಗಳು ನಂತರದಲ್ಲಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸಿದ್ದರು. ಈ ಹಿನ್ನೆಲೆ ಯಲ್ಲಿ ಮಂಡಳಿ ಪರೀಕ್ಷೆ ಫಲಿತಾಂಶವನ್ನು ಮರು ಪರಿಗಣಿಸಬೇಕೆಂದು ರಾಜ್ಯ ಸರ್ಕಾರ ತಿಳಿಸಿತ್ತು.

ಕೆಲ ವಿದ್ಯಾರ್ಥಿಗಳು 11ನೇ ತರಗತಿಯಲ್ಲಿ ಕಡಿಮೆ ಅಂಕ ಪಡೆದಿದ್ದರು ಇಲ್ಲವೇ 12ನೇ ತರಗತಿಯ ಪ್ರಾಯೋಗಿಕ ಪರೀಕ್ಷೆಗಳಲ್ಲಿ ವಿಫಲ ರಾಗಿದ್ದರು. ಇನ್ನೂ ಕೆಲವರು ಕೆಲ ವಿಷಯಗಳ ಪರೀಕ್ಷೆಗೆ ಗೈರಾಗಿದ್ದರು. ಅವರೆಲ್ಲರನ್ನೂ ಈಗ ಪಾಸ್ ಮಾಡಲಾಗಿದೆ ಎಂದು ಮಂಡಳಿ ತಿಳಿಸಿದೆ.

ಪ್ರತಿಭಟನಾ ನಿರತ ವಿದ್ಯಾರ್ಥಿಗಳು ರಸ್ತೆ ತಡೆ ನಡೆಸಿದ್ದರು, ಶಾಲೆಗಳ ಪೀಠೋಪಕರಣಗಳಿಗೆ ಹಾನಿ ಮಾಡಿದ್ದರು, ಶಿಕ್ಷಕರಿಗೆ ಕೆಲ ದಿನಗಳ ಕಾಲ ಘೇರಾವ್ ಮಾಡಿದ್ದರು. ಫಲಿತಾಂಶದಿಂದ ಅತೃಪ್ತರಾದವರು ಕೊರೊನಾ ಪರಿಸ್ಥಿತಿ ತಿಳಿಯಾದ ನಂತರ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವುದಾಗಿ ಮಂಡಳಿ ತಿಳಿಸಿತ್ತು.

# ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆವರಗೆರೆ, ಆಂಜನೇಯ ಕಾಟನ್ ಮಿಲ್, ಬಾಡ ಕ್ರಾಸ್, ಹೆಚ್.ಕಲ್ಪನಹಳ್ಳಿ ಹೊನ್ನೂರು, ಹೊನ್ನೂರು ಗೊಲ್ಲರಹಟ್ಟಿ, ಮಲ್ಲಶೆಟ್ಟಿಹಳ್ಳಿ, ಕರಿಲಕ್ಕೇನಹಳ್ಳಿ. ಚಟ್ಟೋಬನಹಳ್ಳಿ, ಐಗೂರು, ವಡ್ಡನಹಳ್ಳಿ, ಲಿಂಗದಹಳ್ಳಿ. ಹಾಗೂ ಬಸಾಪುರ ಗ್ರಾಮಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಗರದಲ್ಲಿ ಇಂದು 1350 ಡೋಸ್ ಕೋವ್ಯಾಕ್ಸಿನ್ ಲಸಿಕೆ ಹಂಚಿಕೆ

ವಿವಿಧ ಆರೋಗ್ಯ ಸಂಸ್ಥೆಗಳಲ್ಲಿ ಕೋವ್ಯಾಕ್ಸಿನ್ ಲಸಿಕೆಯನ್ನು ಇಂದು ಒಟ್ಟು 1350 ಕೋವಿಡ್ ಲಸಿಕೆಯ 2ನೇ ಡೋಸ್ ಮಾತ್ರ ನೀಡಲಾಗುತ್ತದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್. ಡಿ. ವೆಂಕಟೇಶ್ ತಿಳಿಸಿದ್ದಾರೆ.

**ಹಂಚಿಕೆ ಮಾಡಲಾಗಿರುವ ಕೋವ್ಯಾಕ್ಸಿನ್ ಲಸಿಕೆ ಡೋಸ್‌ಗಳ ವಿವರ :** ಬಾಷಾನಗರ ಆರೋಗ್ಯ ಕೇಂದ್ರ-50, ಭಾರತ್ ಕಾಲೋನಿ-300, ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ-200, ಹೆಚ್‌ಕೆಆರ್ ನಗರ-300, ನಿಟ್ಟುವಳ್ಳಿ ನಗರ ಆರೋಗ್ಯ ಕೇಂದ್ರ-250, ಎಸ್‌ಎಂಕೆ ನಗರ ಆರೋಗ್ಯ ಕೇಂದ್ರ-200, ಡೋಸ್ ಕೋವ್ಯಾಕ್ಸಿನ್ ಲಸಿಕೆ ಹಂಚಿಕೆ ಮಾಡಲಾಗಿದೆ.

# ತೈಲ, ಅಡುಗೆ ಅನಿಲ ಬೆಲೆ ಏರಿಕೆಗೆ ಖಂಡನೆ ಕಾಂಗ್ರೆಸ್ ಒಬಿಸಿ ಘಟಕದಿಂದ ಪ್ರತಿಭಟನೆ



ದಾವಣಗೆರೆ, ಆ.2- ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಒಬಿಸಿ ಘಟಕದಿಂದ ಇಂದು ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಎತ್ತಿನ ಗಾಡಿಯಲ್ಲಿ ಮೆರವಣಿಗೆಯ ಮುಖಾಂತರ ಬೆಲೆ ಏರಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಯಿತು.

ಇದಕ್ಕೂ ಮುನ್ನ ಒಬಿಸಿ ಘಟಕದ ರಾಜ್ಯಾಧ್ಯಕ್ಷ ಎಂ.ಡಿ. ಲಕ್ಷ್ಮಿನಾರಾಯಣ ಅವರು ರಾಯಣ್ಣನ ಪ್ರತಿಮೆಗೆ ಹೂವಿನ ಹಾರ ಹಾಕುವ ಮುಖಾಂತರ ಪ್ರತಿಭಟನೆಗೆ ಚಾಲನೆ ನೀಡಿದರು.

ಸಂಗೊಳ್ಳಿ ರಾಯಣ್ಣನ ವೃತ್ತದಿಂದ ವರ್ತುಲ ರಸ್ತೆಯ ಮುಖಾಂತರ ಕಾಂಗ್ರೆಸ್ ಕಚೇರಿವರೆಗೆ ಎತ್ತಿನ ಗಾಡಿ ಮೆರವಣಿಗೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಆಶಾ ಉಮೇಶ್, ಹಾಲೇಶ್, ಎಐಸಿಸಿ ಸಂಯೋಜಕ ಸತೀಶ್ ಕುಮಾರ್, ಕೆಪಿಸಿಸಿ ಮುನಿರತ್ನ, ಮಾಲಾ, ಒಬಿಸಿ ಘಟಕದ ರಾಜ್ಯ ಪದಾಧಿಕಾರಿಗಳಾದ ಜಮ್ನಳ್ಳಿ ನಾಗರಾಜ್, ಶುಭಮಂಗಳ, ಸಂಗಮ್ಮ, ರಾಧಾಬಾಯಿ, ಭಾರತಿ, ವಿದ್ಯಾ, ಸಲ್ಮಾಬಾನು, ಬಿ.ಎಂ. ಪಾಟೀಲ್, ನಂದಿಗಾವಿ ಶ್ರೀನಿವಾಸ್, ವಿನಯ್, ಅಭಿ, ಆಕಾಶ್, ಮಧು ಕುಮಾರ್, ನಿಂಗರಾಜು, ರವಿ ಶಿಕಾರಿಪುರ, ನಜೀರ್, ಬೀರಪ್ಪ, ಹೊನ್ನಾಳಿ ಶ್ರೀನಿವಾಸ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಆಫ್ರಿಕನ್ನರ ಪುಂಡಾಟಕ್ಕೆ ಬೆಣ್ಣೆ ನಗರಿ ಪೋರನ ಆಕ್ರೋಶ: ವಿಡಿಯೋ ವೈರಲ್



ದಾವಣಗೆರೆ, ಆ.2- ಬೆಂಗಳೂರಿನಲ್ಲಿ ಅಫ್ರಿಕನ್ನರ ಪುಂಡಾಟಕ್ಕೆ ಬೆಣ್ಣೆ ನಗರಿಯ ಪೋರ ಆಕ್ರೋಶ ವ್ಯಕ್ತಪಡಿಸಿದ್ದಾನೆ.

ನಮ್ಮರೊಟ್ಟಿ ತಿಂದು ನಮ್ಮ ಕರ್ನಾಟಕದ ನೀರು ಕುಡಿದು, ನಮ್ಮ ಮೇಲೆ ದಬ್ಬಾಳಿಕೆ ಮಾಡ್ತಿಯಾ. ನಮ್ಮ ಪೊಲೀಸರಿಗೆ ಹೊಡಿತೀಯಾ ಆಫ್ರಿಕಾ ನಾಯಿ ಎಂದು ತಾಲ್ಲೂಕಿನ ಕುಕ್ಕುವಾಡ ಗ್ರಾಮದ ನಾಲ್ಕು ವರ್ಷದ ಉಗ್ರಂ ಎಂಬ ಪೋರನು ಪುಂಡಾಟವಾಡಿದ ಆಫ್ರಿಕನ್ನರ ವಿರುದ್ಧ ಉಗ್ರಾವತಾರ ತಾಳಿದ್ದಾನೆ. ಪೋರನು ಹಸಿರು ಶಾಲು ಹಾಕಿಕೊಂಡು ಆಫ್ರಿಕನ್ನರ ಮೇಲೆ ಆಕ್ರೋಶ ವ್ಯಕ್ತಪಡಿಸಿದ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಸಖತ್ ವೈರಲ್ ಆಗಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಲೇಔಟ್ 'ಎ' ಮತ್ತು 'ಬಿ' ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ಲೇಔಟ್, ರಿಂಗ್ ರೋಡ್, ಶಾಂತಿನಗರ, ಕುಂದುವಾಡ ರೋಡ್, ಮಹಾಲಕ್ಷ್ಮಿ ಲೇಔಟ್, ಕುಂದುವಾಡ ವಾಟರ್ ವರ್ಕ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ದೇವರಾಜ ಅರಸು ಬಡಾವಣೆ 'ಬಿ' ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯ ನಗರ ಬಡಾವಣೆ, ರಾಜೀವ್‌ಗಾಂಧಿ ಬಡಾವಣೆ, ಎಸ್.ಪಿ.ಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್ ಕಾಲೋನಿ ಸೇರಿದಂತೆ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# 6ನೇ ದಿನ ಸಕ್ರಿಯ ಸೋಂಕಿತರ ಏರಿಕೆ

ನವದೆಹಲಿ, ಆ. 2 – ದೇಶದಲ್ಲಿ ಸೋಮವಾರ 40,134 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದೇ ದಿನ 422 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ. ದೇಶದಲ್ಲಿ ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ 4.13 ಲಕ್ಷಕ್ಕೆ ತಲುಪಿದೆ. ಇದು ಒಟ್ಟು ಸೋಂಕಿತರ ಶೇ.1.31ರಷ್ಟಾಗಿದೆ.

ಕಳೆದ 24 ಗಂಟೆಗಳಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 2,766ರಷ್ಟು ಹೆಚ್ಚಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ ಕಳೆದ ಆರು ದಿನಗಳಿಂದ ಏರಿಕೆಯಾಗುತ್ತಿದೆ.

ಭಾನುವಾರ ಬಂದಿರುವ ಕೊರೊನಾ ಟೆಸ್ಟ್ ವರದಿಗಳಲ್ಲಿ ಶೇ.2.81ರ ಪಾಸಿಟಿವ್ ದರ ಇದೆ. ವಾರದ ಪಾಸಿಟಿವ್ ದರ ಶೇ. 2.37 ಆಗಿದೆ.

# ಜಿಲ್ಲೆಯಲ್ಲಿ 4 ದೃಢ, 23 ಗುಣಮುಖ

ದಾವಣಗೆರೆ, ಆ.2- ಜಿಲ್ಲೆಯಲ್ಲಿ ಸೋಮವಾರ 4 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 23 ಜನರು ಗುಣಮುಖರಾದ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 1, ಹರಿಹರ 2 ಹಾಗೂ ಹೊನ್ನಾಳಿ ತಾಲ್ಲೂಕಿನ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 317 ಸಕ್ರಿಯ ಪ್ರಕರಣಗಳಿವೆ.

**ಇಬ್ಬರಲ್ಲಿ ಬ್ಲಾಂಕ್ ಫಂಗಸ್ ಪತ್ತೆ:** ಜಿಲ್ಲೆಯ ಇಬ್ಬರಲ್ಲಿ ಬ್ಲಾಂಕ್ ಫಂಗಸ್ ಪತ್ತೆಯಾಗಿದ್ದು, ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಲ್ಲಿಯವರೆಗೆ 129 ಜನರು ಬ್ಲಾಕ್ ಫಂಗಸ್‌ಗೆ ತುತ್ತಾಗಿದ್ದರು, ಪ್ರಸ್ತುತ 28 ಸಕ್ರಿಯ ಪ್ರಕರಣಗಳಿವೆ.

# ಅಂಚೆ ಕಚೇರಿಗಳಲ್ಲಿ ನಾಳೆ ಉಳಿತಾಯ ಖಾತೆಗಳ ಮಹಾಮೇಳ

ದಾವಣಗೆರೆ, ಆ.2 - ದಾವಣಗೆರೆ, ಹರಿಹರ ಹಾಗೂ ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಎಲ್ಲಾ ಅಂಚೆ ಕಚೇರಿಗಳಲ್ಲಿ ನಾಡಿದ್ದು ದಿನಾಂಕ 4 ರ ಬುಧವಾರ ಅಂಚೆ ಉಳಿತಾಯ ಖಾತೆಗಳನ್ನು ತೆರೆಯುವುದರ ಜೊತೆಗೆ ಗ್ರಾಹಕರಿಗೆ ಅಂಚೆ ಯೋಜನೆಗಳ ಮಾಹಿತಿಯನ್ನು ಒದಗಿಸಲು ಅಂಚೆ ಉಳಿತಾಯ ಖಾತೆಗಳ ಮಹಾಮೇಳವನ್ನು ಹಮ್ಮಿಕೊಳ್ಳಲಾಗಿದೆ.

ಅಂಚೆ ಗ್ರಾಹಕರು ತಮ್ಮ ವಿಳಾಸದ ಗುರುತಿನ ಚೀಟಿ, (ಆಧಾರ್ ಕಾರ್ಡ್) ಪಾನ್ ಕಾರ್ಡ್, ಮೂರು ಪಾಸ್‌ಪೋರ್ಟ್ ಭಾವಚಿತ್ರದೊಂದಿಗೆ ಅಂಚೆ ಕಚೇರಿಗೆ ಭೇಟಿ ನೀಡಿ ಉಳಿತಾಯ ಖಾತೆ, ಆರ್.ಡಿ. ಖಾತೆ, ಸುಕನ್ಯಾ ಸಮೃದ್ಧಿ ಖಾತೆ, ಪಿ.ಪಿ.ಎಫ್ ಖಾತೆ, ಮಾಸಿಕ ವರಮಾನ ಖಾತೆ, ಹಿರಿಯ ನಾಗರಿಕ ಉಳಿತಾಯ ಖಾತೆ, ಟಿ.ಡಿ ಖಾತೆಗಳು, ಎನ್‌ಎಸ್‌ಸಿ ಮತ್ತು ಕೆವಿಪಿ ಖಾತೆಗಳನ್ನು ತೆರೆಯಬಹುದಾಗಿದೆ. ಅಂಚೆ ಗ್ರಾಹಕರು ಅಂಚೆ ಉಳಿತಾಯ ಖಾತೆಗಳ ಮೇಳದ ಸದುಪಯೋಗ ಮಾಡಿಕೊಳ್ಳಬೇಕು ಎಂದು ಚಿತ್ರದುರ್ಗ ವಿಭಾಗದ ಅಂಚೆ ಅಧೀಕ್ಷಕ ಒ.ವಿರುಪಾಕ್ಷಪ್ಪ ತಿಳಿಸಿದ್ದಾರೆ.

# ಸೆಕ್ಷನ್ 66ಎ ಪ್ರಕರಣ: ಸುಪ್ರೀಂ ನೋಟಿಸ್

ನವದೆಹಲಿ, ಆ. 2- ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66ಎ ರದ್ದುಗೊಳಿಸಿದ್ದರೂ ಸಹ, ಪ್ರಕರಣಗಳನ್ನು ಇನ್ನೂ ದಾಖಲಿಸುತ್ತಿರುವ ಬಗ್ಗೆ ರಾಜ್ಯಗಳು ಹಾಗೂ ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ಸರ್ಕಾರೇತರ ಸಂಘಟನೆಯೊಂದು ದಾಖಲಿಸಿದ್ದ ಅರ್ಜಿಯ ವಿಚಾ ರಣೆ ನಡೆಸುತ್ತಿರುವ ನ್ಯಾಯಮೂರ್ತಿಗಳಾದ ಆರ್.ಎಫ್. ನಾರಿಮನ್ ಹಾಗೂ ಬಿ.ಆರ್. ಗವಾಯಿ ಅವರನ್ನು ಒಳಗೊಂಡ ಪೀಠ, ಈ ವಿಷಯ ರಾಜ್ಯಗಳಿಗೆ ಸಂಬಂಧಿಸಿದ್ದಾಗಿದೆ. ಎಲ್ಲಾ ರಾಜ್ಯಗಳನ್ನು ಪ್ರಕರಣದಲ್ಲಿ ಕಕ್ಷಿದಾರರನ್ನಾಗಿ ಮಾಡಬೇಕು. ಈ ಬಗ್ಗೆ ಸಮಗ್ರ ಆದೇಶ ಹೊರಡಿಸಲಾಗುವುದು ಎಂದಿದ್ದಾರೆ.

ನಾಲ್ಕು ವಾರಗಳಲ್ಲಿ ಈ ಬಗ್ಗೆ ಉತ್ತರ ಸಲ್ಲಿಸಬೇಕು ಎಂದು ಗಡುವು ನೀಡಲಾಗಿದೆ. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಅರ್ಜಿಯೊಂದನ್ನು ದಾಖಲಿಸಿ, ಕಾಯ್ದೆ ರದ್ದಾಗಿದ್ದರೂ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿತ್ತು.

# ಕಟ್ಟಡ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷರಾಗಿ ಆವರಗೆರೆ ಉಮೇಶ್



ದಾವಣಗೆರೆ, ಆ.2- ಎಐಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷರಾಗಿ ನಗರದ ಆವರಗೆರೆ ಹೆಚ್.ಜಿ. ಉಮೇಶ್ ಆಯ್ಕೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಇಂದು ನಡೆದ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ಈ ಈ ಆಯ್ಕೆ ನಡೆಯಿತು. ಸಂಘದ ರಾಜ್ಯಾಧ್ಯಕ್ಷರಾಗಿ ಇವರೆಗೂ ಕಾರ್ಯನಿರ್ವಹಿಸುತ್ತಿದ್ದ ಹೆಚ್.ಕೆ.ರಾಮಚಂದ್ರಪ್ಪ ಅವರ ನಿಧನದ ಹಿನ್ನೆಲೆಯಲ್ಲಿ ಈ ಆಯ್ಕೆ ಮಾಡಲಾಯಿತು. ಉಮೇಶ್ ಅವರನ್ನು ಎಐಟಿಯುಸಿ ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ರಾಘವೇಂದ್ರ ನಾಯರಿ ಅಭಿನಂದಿಸಿದ್ದಾರೆ.

# ರೈತರಿಗೆ ಬೆಳೆ ಸ್ಪರ್ಧೆ ಅರ್ಜಿ ಆಹ್ವಾನ

ದಾವಣಗೆರೆ, ಆ.2 - ಬೆಳೆಗಳಲ್ಲಿ ಅತ್ಯುತ್ತಮ ಇಳುವರಿ ಪಡೆಯುವ ರೈತರಿಗಾಗಿ ಬೆಳೆ ಸ್ಪರ್ಧೆಗೆ ಅರ್ಜಿ ಆಹ್ವಾನಿಸಿದ್ದು, ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಆಗಸ್ಟ್ 31 ರೊಳಗೆ ಸಲ್ಲಿಸಬಹುದು. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ರೂ.30000, ದ್ವಿತೀಯ-ರೂ.25000 ಮತ್ತು ತೃತೀಯ ಬಹುಮಾನ ರೂ.20000 ನಿಗದಿಪಡಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ಪ್ರಥಮ ಸ್ಥಾನಕ್ಕೆ ಬಹುಮಾನ ರೂ.15000, ದ್ವಿತೀಯ-ರೂ.10000 ಹಾಗೂ ತೃತೀಯ ಬಹುಮಾನ ರೂ.5000 ನಿಗದಿಪಡಿಸಲಾಗಿದೆ.

ಜಿಲ್ಲೆಯ ಆಯಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.


## ಸ್ಪರ್ಶ ಆಸ್ಪತ್ರೆಯಿಂದ ಉಚಿತ ಶಸ್ತ್ರಚಿಕಿತ್ಸೆ
## ಸ್ಪರ್ಶ ವಚನ-2021: 200 ಜೀವಗಳನ್ನು ಬದುಕಿಸುವ ಒಂದು ಯತ್ನ ಹಾಗು ಪ್ರಮಾಣ

ಮಕ್ಕಳ ಬದುಕು ಸುಖಮಯವಾಗಿಸಬೇಕೆಂಬ ನಮ್ಮ ಹಂಬಲದ ಫಲವಾಗಿ ರೂಪುಗೊಂಡಿದೆ "ಸ್ಪರ್ಶ ವಚನ", ಇದೊಂದು ವೈದ್ಯಕೀಯ ಸೇವಾ ಯೋಜನೆ. ವಿಶೇಷ ಅತ್ಯುನ್ನತ ಸೇವಾ ಸೌಲಭ್ಯ ಒದಗಿಸಿಕೊಡುವುದು ನಮ್ಮ ಗುರಿಯಾಗಿದೆ. ಈ ಯೋಜನೆಯು ಡಾ|| ಶರಣ್‌ಪಾಟೀಲ್ ಅವರು ಸಂಸ್ಥಾಪಿಸಿರುವ ಸ್ಪರ್ಶ ಆಸ್ಪತ್ರೆಯ ಸೇವಾ ವಿಭಾಗವಾಗಿರುವ "ಸ್ಪರ್ಶ ಫೌಂಡೇಶನ್"ನ ಪ್ರಯತ್ನವಾಗಿದೆ.

200 ಕ್ಕೂ ಹೆಚ್ಚು ಮಕ್ಕಳಿಗೆ ಸಂಪೂರ್ಣ ಉಚಿತ ಶಸ್ತ್ರಚಿಕಿತ್ಸಾ ಸೌಲಭ್ಯ ಒದಗಿಸುವುದು ಈ ಯೋಜನೆಯ ವೈಶಿಷ್ಟ್ಯವಾಗಿದೆ. ಪ್ರತೀ ವರ್ಷ ನಡೆಯುವ "ಸ್ಪರ್ಶ ವಚನ" ವೈದ್ಯಕೀಯ ಸೇವಾ ಯೋಜನೆ ಪ್ರಾರಂಭವಾಗಿ ಇಂದಿಗೆ 12 ವರ್ಷಗಳಾಗಿವೆ. ಸುಮಾರು 2000 ಮಕ್ಕಳಿಗೆ ಸಂಪೂರ್ಣ ಉಚಿತ ಯಶಸ್ವಿ ಶಸ್ತ್ರಚಿಕಿತ್ಸೆಗಳನ್ನು ನೀಡಿದೆ. ಈ ವಿಶೇಷ ಸೇವೆಗಾಗಿಯೇ ಪ್ರಪಂಚದ ಎಲ್ಲ ಮೂಲೆಗಳಿಂದ ಪರಿಣಿತ ವೈದ್ಯರುಗಳು, ಆಡಳಿತ ತಜ್ಞರು, ದಾದಿಯರು, ಸ್ವಯಂ ಸೇವಾ ಭಾವನೆಯಿಂದ ಆಗಮಿಸಿ ಸೇವೆ ಸಲ್ಲಿಸುವುದು ಹೆಮ್ಮೆಯ ವಿಷಯವಾಗಿದೆ.

ನಮ್ಮ ಈ ವಿಶಿಷ್ಟ ಯೋಜನೆಗೆ ಪ್ರಾರಂಭದಿಂದಲೂ ನಮ್ಮ ಪತ್ರಿಕಾ ಹಾಗು ಮಾಧ್ಯಮದ ಸಹೋದರರು, ಸಮುದಾಯ ಸಂಸ್ಥೆಗಳು ಮತ್ತು ಬಂಧುಗಳು ಕಾಲ-ಕಾಲಕ್ಕೆ ಸಕಾರಾತ್ಮಕವಾಗಿ ಬೆಂಬಲಿಸುತ್ತಿರುವುದನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಈ ಯೋಜನೆ ಫಲಾನುಭವಿಗಳು ನೂರಾರು ಮಕ್ಕಳು ಎಂಬುದು ದೊಡ್ಡ ಸಂಗತಿಯಾಗಿದೆ.

**ಸ್ಪರ್ಶ ವಚನ ತಪಾಸಣೆ ಶಿಬಿರ**

14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮತ್ತು ವಿವಿಧ ನ್ಯೂನ್ಯತೆಯಿಂದ ಬಳಲುತ್ತಿರುವ ಎಲ್ಲರನ್ನು ಈ ಶಿಬಿರದಲ್ಲಿ ಕೂಲಂಕುಷವಾಗಿ ತಪಾಸಣೆ ನಡೆಸಲಾಗುವುದು. ಈ ತಪಾಸಣೆ ಶಿಬಿರದಲ್ಲಿ ಯಾವುದೇ ಶುಲ್ಕ ನೀಡಬೇಕಾದ ಪ್ರಮೇಯವೇ ಇಲ್ಲ.

**ಶಿಬಿರದ ವಿವರ :**
ದಿನಾಂಕ 5-8-2021
ಸ್ಥಳ :
ಎಸ್.ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್,
ಎಂ.ಸಿ.ಸಿ 'ಎ' ಬ್ಲಾಕ್,
ಮೋತಿವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ,
ಕರ್ನಾಟಕ.

**ಆಯ್ಕೆ ನಿಯಮಾವಳಿಗಳು- ಮೂಳೆಗೆ ಸಂಬಂಧಿತ ಚಿಕಿತ್ಸೆ :**
- ವಕ್ರಪಾದ
- ಬೆನ್ನುಹುರಿ ದುರ್ಬಲತೆ
- ಕೈ ದುರ್ಬಲತೆ
- ಸೆರೆಬ್ರಲ್ ಪ್ಲಾಶ್ಸಿ
- ಪೋಸ್ಟ್ ಪೋಲಿಯೊ ಡಿಫಾರ್ಮಿಟಿ
- ಪೋಸ್ಟ್ ಬರ್ನ್ ಕಾನ್ಸ್ಟ್ರಕ್ಟರ್

ಹೆಚ್ಚಿನ ಮಾಹಿತಿಗಾಗಿ 9686929090/ 9916294908ಗೆ ಸಂಪರ್ಕಿಸಬಹುದು.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte